ಅನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ಒರಿಸ್ಸಾ: ಪುರಿಯ ಭಗವಾನ್ ಜಗನ್ನಾಥ, ಬಲಭದ್ರ, ಸುಭದ್ರೆಯರ ವಿಶ್ವಪ್ರಸಿದ್ಧ ರಥಾಯಾತ್ರೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಗವಹಿಸಿದರು. ರಥಯಾತ್ರೆಯಲ್ಲಿ ಹತ್ತು ಲಕ್ಷಕ್ಕೂ ಅಧಿಕ ಮಂದಿ ಭಕ್ತಾದಿಗಳು ಪಾಲ್ಗೊಂಡಿದ್ದರು.

ಸಂಪುಟ : 46 | ಸಂಚಿಕೆ : 07 | ಆಷಾಢ–ಶ್ರಾವಣ | ಕಲಿಯುಗಾಬ್ದ 5126 | 01–08–2024 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

## ರಕ್ಷಾಬಂಧನ: ಸ್ನೇಹ, ಸಹೋದರತ್ವ, ಸಮರಸತೆಯ ಸಾರುವ ಹಬ್ಬ

ರಕ್ಷಾಬಂಧನ ಹಬ್ಬ ಸಹೋದರತ್ವ, ಸಾಮರಸ್ಯ, ಏಕತೆಯನ್ನು ಸಾರುವ ಹಬ್ಬ. ಪರಸ್ಪರ ಸಹೋದರರಂತೆ, ಬಂಧುಗಳಂತೆ ಪ್ರೀತಿ, ವಿಶ್ವಾಸಗಳಿಂದ ಒಗ್ಗೂಡಿ, ಒಂದೇ ಕುಟುಂಬದವರಂತೆ ಬಾಳಬೇಕು ಎಂಬ ಆಶಯದಿಂದ ರಾಷ್ಟ್ರವ್ಯಾಪಿ ಆಚರಿಸುವ ಉತ್ಸವ. ಈ ನಾಡಿನ ಎಲ್ಲಾ ಹಬ್ಬಗಳಂತೆ ರಕ್ಷಾಬಂಧನವೂ ಜೀವನಮೌಲ್ಯಗಳನ್ನು ತನ್ನ ಆಶಯದಲ್ಲೂ, ಅನೇಕ ಸಾಂಕೇತಿಕ ಲಕ್ಷಣಗಳಿಂದಲೂ ಸಾರುತ್ತದೆ.



ರಾಷ್ಟ್ರೀಯ ಸ್ವಯಂಸೇವಕ ಸಂಘದ 6 ಉತ್ಸವಗಳಲ್ಲಿ ರಕ್ಷಾಬಂಧನವೂ ಒಂದು; ಶ್ರಾವಣ ಮಾಸದ ಹುಣ್ಣಿಮೆಯಂದು ಈ ಉತ್ಸವವನ್ನು ಆಚರಿಸಲಾಗುತ್ತದೆ. ದೇಶಾದ್ಯಂತ ವಿಶೇಷವಾಗಿ ಸೋದರಿಯರು ತಮ್ಮ ಅಣ್ಣ ತಮ್ಮಂದಿರಿಗೆ ರಕ್ಷೆ ಕಟ್ಟಿ ಆಚರಿಸುವ ಹಬ್ಬ ಇದಾದರೂ ತನ್ನ ಹುಟ್ಟು, ಬದುಕು, ಏಳಿಗೆಗೆ ಆಧಾರವಾಗಿರುವ ಈ ಮಾತೃಭೂಮಿಯನ್ನು ಮತ್ತು ಎಲ್ಲ ಹಿಂದುಗಳನ್ನು ಎಲ್ಲ ವಿಧಗಳಲ್ಲೂ ರಕ್ಷಿಸುವುದು ತನ್ನ ಜವಾಬ್ದಾರಿ ಎಂದು ಪ್ರತಿಯೊಬ್ಬ ಹಿಂದುವಿಗೂ ಮನದಟ್ಟಾಗಲು ಮತ್ತು ಈ ಸತ್ಯವನ್ನು ಅವನು ಪುನರ್ಮನನ ಮಾಡಿಕೊಳ್ಳುವಂತಾಗಲು ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ರಕ್ಷಾಬಂಧನವನ್ನು ಆಚರಿಸುತ್ತೇವೆ. ರಾಷ್ಟ್ರೀಯ ಸ್ವಯಂಸೇವಕ ಸಂಘ ಈ ಸಂಪ್ರದಾಯಕ್ಕೆ ವಿಶಾಲವಾದ ರಾಷ್ಟ್ರೀಯ ದೃಷ್ಟಿಕೋನ ಕೊಟ್ಟು ಆಚರಿಸುತ್ತಿದೆ. ನಾವೆಲ್ಲ ಭಾರತಮಾತೆಯ ಮಕ್ಕಳು, ಪರಸ್ಪರ ಸಹೋದರರಂತೆ, ಬಂಧುಗಳಂತೆ ಪ್ರೀತಿ, ವಿಶ್ವಾಸಗಳಿಂದ ಒಗ್ಗೂಡಿ, ಒಂದೇ ಕುಟುಂಬದವರಂತೆ ಬಾಳಬೇಕು ಎಂಬ ಆಶಯದಿಂದ ಈ ಉತ್ಸವವನ್ನು ಎಲ್ಲೆಡೆ ಆಚರಿಸಲಾಗುತ್ತಿದೆ.

**ಸಹೋದರತ್ವವ ಸಾರುವ ಹಬ್ಬ:** ಶ್ರಾವಣ ಪೂರ್ಣಿಮೆಯಂದು ರಕ್ಷಾಬಂಧನದ ಹಬ್ಬವನ್ನು ನಾವು ಆಚರಿಸುತ್ತೇವೆ. ನಿರ್ಮಲ ಪ್ರೇಮದ ಸಂಕೇತವಾಗಿ ಸಹೋದರಿಯರು ಸಹೋದರ ದೀರ್ಘಾಯುಷ್ಯಕ್ಕಾಗಿ, ಸಮೃದ್ಧಿಗಾಗಿ ರಕ್ಷೆಯನ್ನು ಕಟ್ಟಿ ಪ್ರಾರ್ಥಿಸುವುದು ನಮ್ಮ ಪರಂಪರೆ. ರಕ್ಷೆ ಕಟ್ಟಿಸಿಕೊಂಡ ಸಹೋದರರು ತಮ್ಮ ಅಕ್ಕ – ತಂಗಿಯರ ಮಾನ–ಪ್ರಾಣದ ರಕ್ಷಣೆಯನ್ನು ತನ್ನ ಪ್ರಾಣವನ್ನು ಕೊಟ್ಟಾದರೂ ರಕ್ಷಿಸುವೆನೆಂಬ ಜವಾಬ್ದಾರಿಯ ಪ್ರತಿಜ್ಞೆಯನ್ನು ಮಾಡುತ್ತಾನೆ. ಸಹೋದರನು ತನ್ನನ್ನು ರಕ್ಷಿಸಬೇಕೆಂಬ ಸಹೋದರಿಯ ಅಕಾಂಕ್ಷೆ ಮತ್ತು ಸೋದರನಲ್ಲಿ ಅವಳಿಗಿರುವ ಪ್ರೀತಿ, ವಿಶ್ವಾಸಗಳಿಗೆ ಈ ರಕ್ಷೆ ದ್ಯೋತಕವಾಗಿರುತ್ತದೆ. ಸಹೋದರನ ಮನಸ್ಸನ್ನು ದೃಢಗೊಳಿಸುವ ಜ್ಞಾಪಕಚಿಹ್ನೆ ಈ ರಕ್ಷೆಯಾಗಿರುತ್ತದೆ.

**ಸಂಘ ಶಕ್ತಿಃ ಕಲೌ ಯುಗೇ:** ರಕ್ಷಾಬಂಧನದ ದಿನದಂದು ನಾವು ಕಟ್ಟುವ ರಕ್ಷೆ ಸುಂದರ ಸಂದೇಶವನ್ನು ರವಾನಿಸುತ್ತದೆ. ರಕ್ಷೆಗೆ ಬಳಸಲಾದ ಬಿಡಿ ಬಿಡಿಯಾದ ರೇಷ್ಮೆಯ ಎಳೆಗಳಿಗೆ ಅಸ್ತಿತ್ವ ಇಲ್ಲ. ಸ್ವಲ್ಪ ಗಾಳಿ ಬಂದರೆ ಸಾಕು, ಚದುರಿ ಚೆಲ್ಲಾಪಿಲ್ಲಿಯಾಗುತ್ತವೆ. ಅವುಗಳನ್ನೆಲ್ಲಾ ಸೇರಿಸಿ ಒಂದು ದಾರದಿಂದ ಕಟ್ಟಿದಾಗ ಒಂದು ಕುಚ್ಚಾಗಿ ಸುಂದರವೂ ಸುಭದ್ರವೂ ಆದ ರಕ್ಷೆಯಾಗುತ್ತದೆ. ಸಮಾಜದಲ್ಲಿ ವ್ಯಕ್ತಿಗಳು ಸ್ವಾರ್ಥಿಗಳೂ, ಸಂಕುಚಿತ ಪ್ರವೃತ್ತಿಯವರೂ ಆಗಿದ್ದಲ್ಲಿ, ಅವರೆಲ್ಲಾ ಬಿಡಿ ರೇಷ್ಮೆ ಎಳೆಗಳಂತೆ ದುರ್ಬಲರಾಗಿರುತ್ತಾರೆ. ಇಂತಹ ವ್ಯಕ್ತಿಗಳಿರುವ ಸಮಾಜವೂ ದುರ್ಬಲವಾಗಿರುತ್ತದೆ. ಹಿಂದುತ್ವ ನಮ್ಮ ಸಾಂಸ್ಕೃತಿಕ ರಾಷ್ಟ್ರೀಯತೆಯ ಭಾವನೆ. ನಮ್ಮೆಲ್ಲರನ್ನೂ ಒಂದುಗೂಡಿಸುವ ದಾರದಂತೆ. ದಾರ ರಕ್ಷೆಗೆ ಅಸ್ತಿತ್ವ ಮತ್ತು ಶಕ್ತಿಯನ್ನು ತಂದುಕೊಟ್ಟಂತೆ, "ನಾವೆಲ್ಲ ಹಿಂದುಗಳು, ನಾವೆಲ್ಲ ಬಂಧುಗಳು" ಎಂಬ ಭಾವ ಬಿಡಿ ಬಿಡಿಯಾದ ನಮ್ಮನ್ನು ಬೆಸೆಯುತ್ತದೆ, ಸಮಾಜಕ್ಕೆ ಶಕ್ತಿ ತುಂಬುತ್ತದೆ. ಸಹಸ್ರ ವರ್ಷಗಳ ಆಕ್ರಮಣಗಳಿಗೆ ನಾವು ಸುಲಭವಾಗಿ ತುತ್ತಾಗಿದ್ದು ನಮ್ಮಲ್ಲಿನ ಒಳಜಗಳ, ಹೊರಗಿನ ಆಕ್ರಮಣಕಾರನೊಂದಿಗೆ ನಮ್ಮವರೇ ಕೈಜೋಡಿಸಿದ್ದು, ನಮ್ಮ ಇಂಥ ದುಃಸ್ಥಿತಿಗೆ ಕಾರಣವಾಯಿತು. ಮಹಾಭಾರತದ ಕಾಲದಲ್ಲಿನ ಒಂದು ನಿದರ್ಶನ ನಮ್ಮ ಒಗ್ಗಟ್ಟು ಹೇಗಿರಬೇಕೆನ್ನುವುದನ್ನು ತಿಳಿಸಿಕೊಡುತ್ತದೆ. ಪಾಂಡವರು ವನವಾಸದಲ್ಲಿದ್ದಾಗ ಅಲ್ಲಿಗೆ ಬಂದ ಕೌರವರು ಚಿತ್ರಸೇನನೆಂಬ ಗಂಧರ್ವನಿಂದ ಬಂಧಿತನಾಗುತ್ತಾನೆ. ಅವನನ್ನು ಬಿಡಿಸಿ ತರಲು ಭೀಮಾರ್ಜುನರು ಒಪ್ಪದಿದ್ದಾಗ, ಧರ್ಮರಾಯ ಹೇಳಿದ ಮಾತು "ವಯಂ ಪಂಚಾಧಿಕಂ ಶತಂ" – ನಮ್ಮೊಳಗಿನ ವ್ಯವಹಾರದಲ್ಲಿ ನಾವು ಐದು ಮಂದಿ, ಅವರು ನೂರು ಮಂದಿ. ಆದರೆ ಹೊರಗಿನವರಿಂದ ತೊಂದರೆಯಾದಾಗ ನಾವು ನೂರೈದು ಮಂದಿ" ಎಂದು. ಇಂದು ಜಗತ್ತು ಬೆಲೆಕೊಡುವುದು ಶಕ್ತಿ ಇದ್ದವರಿಗೇ ಮಾತ್ರ. ನಮ್ಮ ತತ್ತ್ವ, ಆಚಾರ–ವಿಚಾರಗಳು ಎಷ್ಟೇ ಉತ್ಕೃಷ್ಟವಾಗಿದ್ದರೂ, ಅದರ ಹಿಂದೆ ಬೆಂಬಲಕ್ಕೆ ಶಕ್ತಿ ಇಲ್ಲದಿದ್ದಲ್ಲಿ ಅದಕ್ಕೆ ಬೆಲೆ ಇಲ್ಲ. "ಸಂಘ ಶಕ್ತಿ: ಕಲೌ ಯುಗೆ" – ಕಲಿಯುಗದಲ್ಲಿ ಶಕ್ತಿ ಇರುವುದು ಸಂಘಟನೆಯಲ್ಲಿ. ರಕ್ಷಾಬಂಧನದ ಆಶಯ ಸಂಘಟಿತ ಶಕ್ತಿಯ ಸಾಧನೆಗೆ ಪೂರಕ, ನಾವು ಸಂಘಟಿತರಾದಾಗ ಶಕ್ತಿಸಂಪನ್ನರಾಗುತ್ತೇವೆ. ನಮ್ಮ ಮಾತಿಗೆ ಬೆಲೆ ಬರುತ್ತದೆ ಎನ್ನುವುದಾಗಿದೆ.

**ಸಾಮರಸ್ಯ:** ಹುಟ್ಟಿದ ಜಾತಿಯಿಂದ, ಆಡುವ ಭಾಷೆಯಿಂದ, ಪೂಜಿಸುವ ದೇವರಿಂದ, ಮಾಡುವ ಕೆಲಸದಿಂದ ಯಾರೂ ಶ್ರೇಷ್ಠ ಅಥವಾ ಕನಿಷ್ಠರಾಗುವುದಿಲ್ಲ. ಆದಿಕವಿ ವಾಲ್ಮೀಕಿ ಬೇಡರ ವಂಶದವರು, ವ್ಯಾಸರು ಬೆಸ್ತ ಕನ್ಯೆಯ ಮಗ, ಹನುಮಂತ ವಾನರ, ರಾಮ ಕ್ಷತ್ರೀಯ, ಕೃಷ್ಣ ಗೊಲ್ಲ. ಆದರೆ ತಮ್ಮ ಸಾಧನೆ, ಸಮರ್ಪಣೆ, ಪರರಿಗಾಗಿ ಸವೆಸಿದ ಬದುಕು, ನೀತಿ–ಧರ್ಮಗಳಲ್ಲಿ ಮೇಲ್ಪಂಕ್ತಿಗಳಿಂದಾಗಿ ಇವರೆಲ್ಲರೂ ಪೂಜ್ಯರೆನಿಸಿಕೊಂಡರೇ ವಿನಹ ಅವರ ಜಾತಿ ಮಹತ್ವದ್ದಲ್ಲ. ಪೂಜ್ಯ ನಾರಾಯಣಗುರು, ಡಾ। ಅಂಬೇಡ್ಕರ್ ಮುಂತಾದ ಮಹಾತ್ಮರು, ಸ್ವತಃ ಕೆಳವರ್ಗದಲ್ಲಿ ಜನಿಸಿದ್ದರೂ, ಕೆಳಜಾತಿಯವರ ಕೀಳರಿಮೆ ದೂರಗೊಳಿಸಿ, ಸ್ವಾಭಿಮಾನದಿಂದ ಬದುಕುವಂತೆ ಮಾಡಿ, ಸಮಾಜದಲ್ಲಿನ ಅಸಮಾನತೆಯನ್ನು ದೂರಗೊಳಿಸಲು ಪ್ರಯತ್ನಿಸಿದರು. ಮೇಲು–ಕೀಳು, ಸ್ಪೃಶ್ಯ–ಅಸ್ಪೃಶ್ಯ ಭೇದಭಾವಗಳು ದೂರವಾಗಿ ಸಾಮರಸ್ಯ ಮೂಡಿಬಂದಾಗಲೇ ನಮ್ಮ ಸಮಾಜಕ್ಕಂಟಿದ ಕಳಂಕ ದೂರವಾದೀತು. ಇಲ್ಲದಿದ್ದರೆ ನಮ್ಮಲ್ಲಿನ ಮೇಲು–ಕೀಳು, ಅಸ್ಪೃಶ್ಯತೆ, ಬಡತನ, ಮುಗ್ಧತೆ, ಇವುಗಳ ದುರ್ಲಾಭ ಪಡೆದುಕೊಂಡು ಮತಾಂತರದ ಕೆಲಸವನ್ನು ವಿದೇಶೀ ಬೆಂಬಲದ ಕುಮ್ಮಕ್ಕಿನಿಂದ ತಮ್ಮ ಸಂಖ್ಯೆ ಹೆಚ್ಚಿಸಿಕೊಳ್ಳುವ ಹುನ್ನಾರಗಳಿಂದ ಸೆಮೆಟಿಕ್ ರಿಲಿಜನ್‌ಗಳು ಮುಂದುವರಿಯುತ್ತಿವೆ. ದೇಶದಲ್ಲಿ ಬಹುಸಂಖ್ಯೆಯಲ್ಲಿರುವ ಹಿಂದು ಸಮಾಜದ ಅಸಂಘಟಿತ ಸ್ಥಿತಿಯ ಕಾರಣದಿಂದ ದೇಶವನ್ನು ದುರ್ಬಲಗೊಳಿಸುವ ಪ್ರವೃತ್ತಿಗಳು ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಿವೆ. ಅದರ ಪರಿಣಾಮ ಅವರು ಮಾಡುವು ಮತಾಂತರದಿಂದ ಇಲ್ಲಿನ ಜನ ಕೇವಲ ತಮ್ಮ ಪೂಜಾಪದ್ಧತಿಯನ್ನು ಮಾತ್ರ ಬದಲಿಸದೆ ತಮ್ಮ ನಿಷ್ಠೆಯನ್ನೇ ಇತರೆ ನಾಡಿನೆಡೆಗೆ ಕೇಂದ್ರೀಕರಿಸಿ ರಾಷ್ಟ್ರಾಂತರಗೊಳ್ಳುತ್ತಾರೆ ಎನ್ನುವುದನ್ನು ನೆನಪಿನಲ್ಲಿಡಬೇಕು.


**ಏಕತೆ – ರೂಪ ಹಲವು ಭಾವ ಒಂದೇ:** ವಿವಿಧ ಹೂಗಳಿರುವ ಹಾರದಲ್ಲಿ ವೈವಿಧ್ಯತೆ ಇದ್ದರೂ ಸೌಂದರ್ಯ ಇದೆ. ಅವನ್ನೆಲ್ಲ ಪೋಣಿಸುವ ಸೂತ್ರವೇ ಅದಕ್ಕೆ ಆಧಾರ. ಹಾಗೆಯೇ ವೈವಿಧ್ಯತೆಯಿಂದ ಕೂಡಿದ ಈ ರಾಷ್ಟ್ರದಲ್ಲಿ ಪರಸ್ಪರ ಬಂಧುತ್ವದ ಅರಿವಾಗಿ, ಆ ರೀತಿಯ ಜೀವನ ನಡೆದಾಗ ನಮ್ಮ ಸಮಾಜವು ಅತಿ ಸುಂದರವಾಗುತ್ತದೆ. ರಾಷ್ಟ್ರಜೀವನದಲ್ಲಿ ನಮ್ಮನ್ನು ಜೋಡಿಸುವ ಸೂತ್ರವೇ 'ಹಿಂದುತ್ವ'. ಈ ರಾಷ್ಟ್ರಕ್ಕೆ ಸಾವಿರಾರು ವರ್ಷಗಳ ಭವ್ಯ ಚರಿತ್ರೆಯಿದೆ. ಉತ್ತಮ ಮಾನವನಾಗಿ ಬದುಕಲು ಬೇಕಾದ ಸಂಸ್ಕೃತಿಯನ್ನು ಈ ನಾಡು ಜಗತ್ತಿಗೆ ಭಾರತೀಯರ ಬದುಕಿನ ಉದಾಹರಣೆಯ ಮೂಲಕ ನೀಡಿದೆ. ಈ ಸಂಸ್ಕೃತಿಯ ಪ್ರವಾಹದಲ್ಲಿ ಬಂದ ಸಹಸ್ರಾರು ಮಹಾಪುರುಷರು, ಮಹಾಮಾತೆಯರು ಈ ನಾಡಿನ ಏಳ್ಗೆಗಾಗಿ ಜೀವಿಸಿದರು. ಅವರೆಲ್ಲರೂ ಪ್ರಾತಃಸ್ಮರಣೀಯರು. 'ದೇವನೊಬ್ಬ ನಾಮ ಹಲವು' ಎಂದು ಜನರಿಗೆ ಕಲಿಸಿದ ಪುಣ್ಯಭೂಮಿ ಇದು. ಪ್ರತಿ ಜೀವಿಯೂ ಸಾಧನೆಯಿಂದ ಉತ್ತಮಗತಿ ಹೊಂದಬಲ್ಲನು, ಅವನಲ್ಲಿರುವ ದೈವೀ ಅಂಶ ಜಾಗೃತವಾಗಬಲ್ಲದೆಂದು ಸಾಧಿಸಿ ತೋರಿಸಿದ ನಾಡಿದು. ಸಮಾಜಕಂಟಕರನ್ನು ಹೋರಾಟ, ತ್ಯಾಗ, ಬಲಿದಾನಗಳಿಂದ ಎದುರಿಸಿ ಸೋಲಿಸಿದ ಕ್ಷಾತ್ರಭೂಮಿ ಇದು. ವಿಜ್ಞಾನ, ಕಲೆ, ವೈದ್ಯಕೀಯ, ಮನಃಶಾಸ್ತ್ರ, ವಾಣಿಜ್ಯ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಮಹೋನ್ನತಿ ಸಾಧಿಸಿದ ಹಿರಿಮೆ ನಮ್ಮ ರಾಷ್ಟ್ರದ್ದು. ಈ ಸತ್ಯವನ್ನು ಅರಿತು ನಮ್ಮಲ್ಲಿ ಏಕತೆಯನ್ನು ಮೂಡಿಸಿ, ನಮ್ಮ ರಾಷ್ಟ್ರದ ಭವ್ಯತೆಯ ಅರಿವನ್ನು ನಮಗೆ ಮೂಡಿಸುವಲ್ಲಿ ರಕ್ಷಾಬಂಧನದ ನಿಮಿತ್ತ ನಾವು ಕಟ್ಟುವ ರಕ್ಷೆ ಸಹಕರಿಸುತ್ತದೆ.

ಭಯೋತ್ಪಾದನೆ, ಆರ್ಥಿಕ ಆಕ್ರಮಣ, ಸಾಂಸ್ಕೃತಿಕ ಆಕ್ರಮಣ, ಮತಾಂತರ – ಇವುಗಳು ನಾನಾ ವಿಧದ ಮುಖವಾಡಗಳನ್ನು ಧರಿಸಿಕೊಂಡು ಇನ್ನೂ ಎಚ್ಚೆತ್ತುಕೊಳ್ಳದ ಅನೇಕ ಸ್ಥಳೀಯರ ಮೂಲಕವೇ ಬೆಳೆಯುತ್ತಿವೆ. ಅನೇಕ ವಿದೇಶಿ ಶಕ್ತಿಗಳು ನಾನಾ ವಿಧಗಳಲ್ಲಿ ನಮಗೆ ಕೆಡುಕ್ಕುಂಟು ಮಾಡುವ ಹುನ್ನಾರ ಮಾಡುತ್ತಿವೆ. ರಾಷ್ಟ್ರೀಯ ಐಕ್ಯದಿಂದಲೇ ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯ. ಈ ಸಂದರ್ಭದಲ್ಲಿ ರಾಷ್ಟ್ರದ ರಕ್ಷಣೆ ಪ್ರತಿಯೊಬ್ಬನ ಕರ್ತವ್ಯ. ಕ್ಷುಲ್ಲಕ ವೈಷಮ್ಯಗಳನ್ನು ಬದಿಗೆ ಸರಿಸಿ, 'ಪ್ರತಿ ಹಿಂದುವೂ ನನ್ನ ಬಂಧು' ಎಂಬುದನ್ನು ಅರಿತುಕೊಂಡು ಅದಕ್ಕೆ ತಕ್ಕಂತಹ ಸಾಮರಸ್ಯದ, ಜವಾಬ್ದಾರಿಯುತ ಬದುಕನ್ನು ನಡೆಸುವುದು ನಮ್ಮೆಲ್ಲರ ಹೊಣೆಯಾಗಿದೆ. ನಾವು ಕಟ್ಟಿಕೊಳ್ಳುವ ರಕ್ಷೆ ಇದನ್ನು ಕಾರ್ಯಗತಗೊಳಿಸಲು ನಮಗೆ ಸದಾ ಸ್ಫೂರ್ತಿ ನೀಡುತ್ತದೆ.

ನಾವು ಭಾರತೀಯರು ಪ್ರಾಂತ–ಭಾಷೆಗಳಲ್ಲಿ ವೇಷ–ಭೂಷ ಆಹಾರ–ವಿಹಾರ, ಪೂಜಾ–ಪದ್ಧತಿ, ವೃತ್ತಿ–ಕಸುಬು, ರೂಪ–ವರ್ಣಗಳಲ್ಲಿ ಬೇರೆ ಬೇರೆಯೇ ಆಗಿದ್ದೇವೆ. ಇದು ಭಿನ್ನತೆ ಅಲ್ಲ. ಇದರಲ್ಲಿ ಏಕತೆ ಅಡಗಿದೆ. ವಿವಿಧತೆ ದೌರ್ಬಲ್ಯವಲ್ಲ. ಅದು ಸಮೃದ್ಧಿಯ, ಶಕ್ತಿಯ ಲಕ್ಷಣ. ನಮ್ಮ ಭಾಷೆಗಳು ಬೇರೆ ಇರಬಹುದು. ಅವುಗಳ ವರ್ಣಮಾಲೆಗಳ ಮೂಲ ರಚನೆ ಸಮಾನ. ನಾವೆಲ್ಲ ಭಾರತಾಂಬೆಯ ಪುತ್ರರು, ಹಾಗಾಗಿ ನಾವೆಲ್ಲರೂ ಸೋದರರೆಂಬ ಐಕ್ಯಭಾವನೆ ಪ್ರತಿ ಹಿಂದುವಿನಲ್ಲಿ ಜಾಗೃತವಾಗಬೇಕು. ವಿವಿಧ ಭಾಷೆ, ಜಾತಿ, ಪಂಗಡಗಳಿಗೆ ಸೇರಿದ್ದರೂ ಈ ವಿಶಾಲ ತಾಯ್ನಾಡಿನ ಮಕ್ಕಳಾದ ನಾವೆಲ್ಲರೂ 'ಹಿಂದುಗಳು', ಆದ್ದರಿಂದ 'ಬಂಧುಗಳು' ಎಂಬ ಸತ್ಯದ ಅರಿವಾಗಬೇಕು. ಅರಿವನ್ನು ಜಾಗೃತಿಗೊಳಿಸುವುದಕ್ಕಾಗಿ ರಕ್ಷಾಬಂಧನದಂದು ನಾವು ಕಟ್ಟುವ ರಕ್ಷೆ ಕಾರಣವಾಗುತ್ತದೆ.

> ರಕ್ಷಾ ಬಂಧನ ಹಬ್ಬವು ಸಹೋದರ ಮತ್ತು ಸಹೋದರಿಯ ನಡುವಿನ ಬಾಂಧವ್ಯವನ್ನು ತಿಳಿಸುವುದು ಮಾತ್ರವಲ್ಲದೆ ಕೌಟುಂಬಿಕ ಮೌಲ್ಯಗಳನ್ನು ಬಲಪಡಿಸುತ್ತದೆ. ಇದು ಕೇವಲ ವೈಯಕ್ತಿಕ ಭದ್ರತೆಗೆ ಸಂಬಂಧಿಸಿದ್ದಲ್ಲ. ಸಮಾಜದ ಕಡೆಗೆ ನಮ್ಮ ಜವಾಬ್ದಾರಿಗಳನ್ನು ಪೂರೈಸಲು, ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯವನ್ನು ರಕ್ಷಿಸಲು ಮತ್ತು ಜಾಗತಿಕ ಶಾಂತಿ ಮತ್ತು ಸಮೃದ್ಧಿಗೆ ದಾರಿ ಮಾಡಿಕೊಡುವ ವಿಶ್ವಬಂಧುತ್ವದ ವಾತಾವರಣವನ್ನು ಉತ್ತೇಜಿಸಲು ನಮಗೆ ಸ್ಫೂರ್ತಿ ನೀಡುತ್ತದೆ.
>
> – **ಡಾ. ಮೋಹನ್ ಭಾಗವತ್,** ಸರಸಂಘಚಾಲಕರು,
> ರಾಷ್ಟ್ರೀಯ ಸ್ವಯಂಸೇವಕ ಸಂಘ

## ಸಂಸ್ಮರಣೆ
# ಯೋಗಿ ಅರವಿಂದರು (15 ಆಗಸ್ಟ್ 1872 – 05 ಡಿಸೆಂಬರ್ 1950)



ಮಹಾ ಯೋಗಿ ಅರವಿಂದ (ಅರಬಿಂದೊ) ಘೋಷರು ಭಾರತದ ತತ್ತ್ವಜ್ಞಾನಿ, ಕವಿ, ಸ್ವಾತಂತ್ರ್ಯ ಹೋರಾಟಗಾರ ಮತ್ತು ಅಪ್ಪಟ ರಾಷ್ಟ್ರೀಯವಾದಿ. ಅವರು ಆಗಸ್ಟ್ 15, 1872 ರಂದು ಜನಿಸಿದರು. ತಂದೆ ಕೃಷ್ಣಧನ ಘೋಷ್. ತಾಯಿ ಸ್ವರ್ಣಲತಾದೇವಿ. ಬಾಲ್ಯದಿಂದಲೂ ಬಹುಶ್ರುತ ಪ್ರತಿಭೆಯಾಗಿದ್ದ ಅರವಿಂದರು ಮುಂದೆ ಮಹಾನ್ ಯೋಗಿ ಎನಿಸಿಕೊಂಡವರು. ಭಾರತದ ಸಂಸ್ಕೃತಿ ಮತ್ತು ಪರಂಪರೆಗೆ ಹೊಸ ಭಾಷ್ಯ ಬರೆದವರು. ವೇದಾನುಸಂಧಾನ ಮಾಡಿದವರು. ಬದುಕಿನ ನಶ್ವರತೆ ಬಗ್ಗೆ ತಿಳಿದುಕೊಂಡಿದ್ದ ಅರವಿಂದರು ದಿವ್ಯ ಜೀವನವನ್ನು ತಮ್ಮ ಆಧ್ಯಾತ್ಮ ಚಿಂತನೆ ಮತ್ತು ಸಾಧನೆಯಿಂದ ಕಂಡುಕೊಂಡರು. ಅರವಿಂದರು ಸಮಷ್ಟಿಯ ಉದ್ಧಾರಕ್ಕಾಗಿ ಯೋಗ ಸಾಧನೆ ಮಾಡಿದವರು. ತಮ್ಮ ಪೂರ್ಣಯೋಗ ಮಾರ್ಗದಿಂದಲೇ ಭಾರತಕ್ಕೆ ಹೊಸ ಹೊಳಹನ್ನು ಕೊಟ್ಟವರು. ಅರವಿಂದರು ದಾರ್ಶನಿಕರಾಗಿ ಮತ್ತು ಆಧ್ಯಾತ್ಮದ ಮಾರ್ಗದರ್ಶಕರಾಗಿ ಹತ್ತು ಹಲವು ಕೃತಿಗಳನ್ನು ಬರೆದರು. ಅವರ ಬಹುತೇಕ ಕೃತಿಗಳು ಭಾರತದ ಸಮಗ್ರ ಸಂಸ್ಕೃತಿ ಆಚಾರ – ವಿಚಾರಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಸಾವಿತ್ರಿ, ಕಾಳಿದಾಸ, ಯೋಗ ಸಮನ್ವಯ ಅರವಿಂದರ ಮಹತ್ವದ ಕೃತಿಗಳು. ಅರವಿಂದರ ಕೃತಿಗಳು ಜೀವನ ಪಥವನ್ನು ತೋರಿಸುತ್ತವೆ.

ಅರವಿಂದರ ಬದುಕು ಮತ್ತು ಬರಹ ಹಲವರನ್ನು ಪ್ರಭಾವಿಸಿದೆ. ಮದನ ಮೋಹನ ಮಾಳವೀಯ, ಸುಭಾಷ್ ಚಂದ್ರ ಬೋಸ್, ರವೀಂದ್ರನಾಥ ಟಾಗೋರ್ ಅರವಿಂದರ ಪ್ರಭಾವಕ್ಕೆ ಒಳಗಾಗಿ ಅವರನ್ನು ತಮ್ಮ ಮಾನಸ ಗುರುವಾಗಿ ಸ್ವೀಕರಿಸಿದವರು. ಕನ್ನಡದ ಕುವೆಂಪು, ಬೇಂದ್ರೆ, ಮಧುರ ಚೆನ್ನರಂಥ ಕವಿಗಳ ಮೇಲೂ ಅರವಿಂದರ ಪ್ರಭಾವವಿತ್ತು. ಇನ್ನು ಅವರ ಚಿಂತನೆಗಳು ಪೀಳಿಗೆಗಳಿಗೆ ಬೇಕಾಗಿವೆ.

ಭಾರತದ ಸಂಸ್ಕೃತಿಯ ಮಹತ್ವ ಸಾರುವ 'The foundations of Indian culture' ಅರವಿಂದರು ತಮ್ಮ ಮಹತ್ವದ ಕೃತಿಯಾದ 'ದಿ ಫೌಂಡೇಶನ್ಸ್ ಆಫ್ ಇಂಡಿಯನ್ ಕಲ್ಚರ್' ನಲ್ಲಿ ಭಾರತೀಯ ಸಂಸ್ಕೃತಿಯ ಮೂಲ ತತ್ವವನ್ನು ವಿವಿಧ ಹಂತಗಳಲ್ಲಿ ತೆರೆದಿಟ್ಟಿದ್ದಾರೆ. ತಮ್ಮ ಆಳವಾದ ಒಳನೋಟದಿಂದ ಭಾರತೀಯ ಸಂಸ್ಕೃತದ ಅಡಿಪಾಯವನ್ನು ಅರ್ಥ ಮಾಡಿಸುವ ಪ್ರಯತ್ನ ಮಾಡಿದ್ದಾರೆ. ಇಡೀ ಕೃತಿಯಲ್ಲಿ ಭಾರತದ ಅವಿಚ್ಛಿನ್ನ ಸಂಸ್ಕೃತಿ, ಪರಂಪರೆ, ಇತಿಹಾಸ ಮತ್ತು ಜನಾದರ್ಶದ ಬಗ್ಗೆ ವಿವರವಾಗಿ ತಿಳಿಸಿಕೊಟ್ಟಿದ್ದಾರೆ. ಕೃತಿಯಲ್ಲಿನ ಅರವಿಂದರ ದೃಷ್ಟಿಕೋನವು ದಾರ್ಶನಿಕವಾಗಿದೆ. ಹಾಗಾಗಿ ಕೃತಿಯು ಭಾರತದ ಶ್ರೀಮಂತ ಸಂಸ್ಕೃತಿಯ ಬಗ್ಗೆ ಆಳವಾದ ತಿಳುವಳಿಕೆಯನ್ನು ನೀಡುತ್ತದೆ. ದೇಶದ ಭವಿಷ್ಯವನ್ನು ರೂಪಿಸುವುದಕ್ಕೆ ಬೇಕಾದ ಅಗತ್ಯ ಅಂಶಗಳನ್ನು ಅರವಿಂದರು ನಾನಾ ತೆರನಾದ ನೆಲೆಗಟ್ಟಿನಲ್ಲಿ ತೋರಿಸಿಕೊಟ್ಟಿದ್ದಾರೆ. ವೇದ, ಉಪನಿಷತ್ತು, ಭಗವದ್ಗೀತೆ ಸೇರಿದಂತೆ ಭಾರತದ ಹಲವಾರು ಗ್ರಂಥವನ್ನು ಅವಲೋಕಿಸಿ ಸಂಸ್ಕೃತಿಯ ಮೂಲ ಬೇರನ್ನು ಹುಡುಕಿ ಸೂಕ್ಷ್ಮವಾಗಿ ವಿಶ್ಲೇಷಣೆ ನೀಡಿದ್ದಾರೆ. ಭಾರತದ ಸಂಸ್ಕೃತಿಯ ಪ್ರಾಮುಖ್ಯತೆ ಮತ್ತು ಅದರ ಶ್ರೀಮಂತಿಕೆ ಕುರಿತು ತಿಳಿದುಕೊಳ್ಳಲು ಬಯಸುವವರು ಅರವಿಂದರ ಈ ಕೃತಿಯನ್ನು ಅಗತ್ಯವಾಗಿ ಓದಬೇಕಿದೆ.

'ಭಾರತ ಸಂಸ್ಕೃತಿಯ ಆತ್ಮ' ಎಂಬುದನ್ನು ಅರವಿಂದರು ತಮ್ಮ ಪಾಂಡಿತ್ಯಪೂರ್ಣ ಬರಹದ ಮೂಲಕ ಹೇಳಿದ್ದಾರೆ. ಅವರ ಆಧ್ಯಾತ್ಮ ಮತ್ತು ತತ್ವಜ್ಞಾನದ ಹರಹು ಕೃತಿಯನ್ನು ಗಂಭೀರ ದಿಕ್ಕಿನತ್ತ ಕೊಂಡೊಯ್ದಿದೆ. 'ದಿ ಫೌಂಡೇಶನ್ಸ್ ಆಫ್ ಇಂಡಿಯನ್ ಕಲ್ಚರ್' ಕೃತಿಯು ಸಂಸ್ಕೃತಿಯ ತೊಟ್ಟಿಲಾದ ಭಾರತಕ್ಕೆ ಯಾವಾಗಲೂ ಪ್ರಸ್ತುತ. ಅರವಿಂದರು ಪ್ರಸ್ತುತತೆಗೆ ಮತ್ತು ಭಾರತದ ಭವಿಷ್ಯಕ್ಕಾಗಿ ಈ ಕೃತಿಯನ್ನು ಬರೆದಿದ್ದಾರೆ. ನಿಜವಾದ ಭಾರತೀಯತೆಯನ್ನು ತಾವು ಇರುವ ಕಾಲಕ್ಕೂ ತೋರಿಸಿಕೊಟ್ಟ ಅರವಿಂದರು ಸರ್ವ ಕಾಲಕ್ಕೂ ಪ್ರಸ್ತುತ. ಪ್ರಸಿದ್ಧ ದಾರ್ಶನಿಕ ಮತ್ತು ಯೋಗ ಸಮನ್ವಯದ ಗುರುಗಳಾದ ಅರವಿಂದರು 1950ರ ಡಿಸೆಂಬರ್ 5ರಂದು ನಿಧನರಾದರು.


## ರಾಷ್ಟ್ರೀಯ ಪ್ರತೀಕಗಳ ಸಮ್ಮಾನ

ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರೀಯಗಾನ ಇತ್ಯಾದಿಗಳನ್ನು ರಾಷ್ಟ್ರೀಯ ಸಂಕೇತಗಳೆಂದು ಗುರುತಿಸುತ್ತೇವೆ. ಅವುಗಳಿಗೆ ಸೂಕ್ತವಾದ ಗೌರವವನ್ನು ಸಲ್ಲಿಸಬೇಕಾಗಿರುವುದು ಈ ನಾಡಿನ ನಾಗರಿಕರಾದ ನಮ್ಮ ಶಿಷ್ಟಾಚಾರದ ಜೊತೆಗೆ ನಮ್ಮ ಸಂವಿಧಾನದಲ್ಲಿ ಉಲ್ಲೇಖಿಸಿರುವ ನಮ್ಮ ಮೂಲಭೂತ ಕರ್ತವ್ಯ. ಹಾಗಾಗಿ ರಾಷ್ಟ್ರೀಯ ಸಂಕೇತಗಳಿಗೆ ಗೌರವವನ್ನು ನೀಡುವುದು ಪ್ರತಿಯೊಬ್ಬ ಭಾರತೀಯ ಪೌರನ ಆದ್ಯ ಕರ್ತವ್ಯ. ನಮ್ಮ ಸಂವಿಧಾನದ 42ನೇ ತಿದ್ದುಪಡಿಯಲ್ಲಿ '4A' ಎಂಬ ಭಾಗ ಮತ್ತು ವಿಧಿ '51ಎ'ಯನ್ನು ಜಾರಿಗೆ ತರಲಾಯಿತು. ಇದರ ಅಡಿಯಲ್ಲಿ ಮೂಲಭೂತ ಕರ್ತವ್ಯಗಳನ್ನು ಅಳವಡಿಸಲಾಯಿತು. ಮೊದಲನೆಯದಾಗಿ ರಾಷ್ಟ್ರೀಯ ಸಂಕೇತಗಳಾದ ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು ಎಂಬುದು ಉಲ್ಲೇಖಿತವಾಗಿದೆ. ರಾಷ್ಟ್ರೀಯ ಪ್ರತೀಕಗಳ ಗೌರವ ಸಂವಿಧಾನಕ್ಕೆ ನೀಡುವ ಗೌರವವೂ ಹೌದು. ರಾಷ್ಟ್ರೀಯ ಸಂಕೇತಗಳು ರಾಷ್ಟ್ರದ ಏಕತೆ ಮತ್ತು ಸಾರ್ವಭೌಮತ್ವವನ್ನು ಪ್ರತಿನಿಧಿಸುತ್ತವೆ. ಸಾವಿರಾರು ವರ್ಷಗಳ ಸಂಘರ್ಷದ ಇತಿಹಾಸದ ನಂತರ ಕಂಡ ಸ್ವರಾಜ್ಯಕ್ಕಾಗಿ ನಡೆದ ತ್ಯಾಗ, ಬಲಿದಾನಗಳಿಗೂ ಸಲ್ಲಿಸುವ ಗೌರವವಾಗಿದೆ. ರಾಷ್ಟ್ರಗೀತೆಯನ್ನು ಹಾಡುವಾಗ, ರಾಷ್ಟ್ರಧ್ವಜವನ್ನು ಆರೋಹಣ ಮಾಡುವಾಗ ಅವುಗಳಿಗೂ ಇರುವ ಶಿಷ್ಟಾಚಾರವನ್ನು ನಾವು ಪಾಲಿಸಬೇಕು. ಈ ನಾಗರಿಕ ಶಿಷ್ಟಾಚಾರದ ಪಾಲನೆ ನಾವೆಲ್ಲರೂ ಒಂದು ಎನ್ನುವ ಒಮ್ಮತದ ಒಗ್ಗಟ್ಟನ್ನು ಭಾರತೀಯರೊಳಗೆ ಮೂಡುವಂತೆ ಮಾಡುತ್ತದೆ. ರಾಷ್ಟ್ರೀಯ ಭಾವ ಜಾಗೃತಿಗಾಗಿ ಸ್ಫೂರ್ತಿಯನ್ನೂ ನೀಡುತ್ತದೆ.

## ಮಕ್ಕಳಿಗಾಗಿ ಶ್ರೀ ರಮಣ ಮಹರ್ಷಿ ಕತೆಗಳು

**ಲೇಖಕರು:** ವೃಷಾಂಕ ಭಟ್ ನಿವಣೆ
**ಬೆಲೆ:** 99ರೂ
**ಪ್ರಕಾಶಕರು:** ಅಯೋಧ್ಯಾ ಪಬ್ಲಿಕೇಶನ್ಸ್

ಪುಸ್ತಕ ಪರಿಚಯ




ರಮಣ ಮಹರ್ಷಿಗಳು ಈ ರಾಷ್ಟ್ರ ಕಂಡಂತಹ ಮಹಾನ್ ಚಿಂತಕರು, ಒಬ್ಬ ಶ್ರೇಷ್ಠ ದಾರ್ಶನಿಕರು. ತತ್ವಜ್ಞಾನಿಯಾಗಿ ದೇಶ ವಿದೇಶದಲ್ಲಿ ಗುರುತಿಸಿಕೊಂಡ ಮಹಾನ್ ಸಂತರು. ಭಗವಾನ್ ಶ್ರೀ ರಮಣ ಮಹರ್ಷಿಗಳು ನೀಡುತ್ತಿದ್ದ ಸಂದೇಶಗಳು ಮಾನವೀಯತೆಯನ್ನು ಸಾರುತ್ತಿತ್ತು. ಮಹರ್ಷಿಗಳ ಸರಳಾತಿಸರಳ ಬದುಕೇ ಜಗತ್ತಿಗೆ ಒಂದು ಅದ್ಭುತ ಸಂದೇಶ. ನುಡಿದಂತೆ ನಡೆಯುವುದನ್ನು ಎಲ್ಲ ಧರ್ಮಗಳೂ, ಮಹಾನ್ ಗ್ರಂಥಗಳು ಸಾರಿದೆ. ಅದನ್ನು ಪಾಲಿಸಿದವರು ರಮಣ ಮಹರ್ಷಿಗಳು. ಅಂತರಂಗವನ್ನು ಶುದ್ಧವಾಗಿಟ್ಟುಕೊಳ್ಳುವ ಬಗೆಯನ್ನು ರಮಣ ಮಹರ್ಷಿಗಳು ತಿಳಿಸಿಕೊಟ್ಟಿದ್ದಾರೆ. ರಮಣ ಮಹರ್ಷಿಗಳು ಜೀವನದ ಸಾರ್ಥಕತೆಯನ್ನು ತಿಳಿಸುವ ಸಲುವಾಗಿ ಸಾರಿದ ಸಂದೇಶಗಳನ್ನು ಚಿಕ್ಕ ಮಕ್ಕಳಿಗೆ ಮನಮುಟ್ಟುವಂತೆ ಅರ್ಥೈಸುವ ರೀತಿಯಲ್ಲಿ ಲೇಖಕ ವೃಷಾಂಕ ಭಟ್ ನಿವಣೆ ಬರೆದಿರುವ ಪುಸ್ತಕ 'ಮಕ್ಕಳಿಗಾಗಿ ಶ್ರೀ ರಮಣ ಮಹರ್ಷಿ ಕತೆಗಳು'. ಕತೆಗಳ ಮೂಲಕ ಜೀವನಮೌಲ್ಯಗಳನ್ನು ಕಲಿಯುವುದಕ್ಕೆ ಅನುಕೂಲ ಮಾಡಿಕೊಡುವ ಪುಸ್ತಕವಿದು.
ಪುಸ್ತಕಕ್ಕಾಗಿ ಸಂಪರ್ಕಿಸಿ: 7795827307, 6360581957

# ಸೇವೆಗಾಗಿ ಸದಾ ಸಿದ್ಧರಿರುವ ಶ್ರದ್ಧೆಯ ಪುಷ್ಪಗಳು

26ನೇ ಜನವರಿ 2003. 62 ವರ್ಷಕ್ಕಿಂತಲೂ ಹೆಚ್ಚು ವಯಸ್ಸಾಗಿರುವ ವಿಮಲಾ ಕುಮಾವತ್ ಈ ದಿನವನ್ನೇ ತಮ್ಮ ಜನ್ಮದಿನವೆಂದು ಹೇಳುತ್ತಾರೆ. ಏಕೆಂದರೆ ಆ ದಿನ ಸಂಘದ ಜ್ಯೇಷ್ಠ ಪ್ರಚಾರಕರಾದ ಧನಪ್ರಕಾಶ ತ್ಯಾಗಿ ಅವರ ಪ್ರೇರಣೆಯಿಂದ ಅವರು ಜೈಪುರದ ತಮ್ಮ ಮನೆಯ ಸಮೀಪದ ವಾಲ್ಮೀಕಿ ಸೇವಾಬಸ್ತಿಯ ಚಿಂದಿ ಆಯುವ 5 ಹುಡುಗರನ್ನು ಶಿಕ್ಷಣಕ್ಕೋಸ್ಕರ ತಮ್ಮ ಮನೆಗೆ ಕರೆತಂದ ದಿನ. ಮೂವರು ಗಂಡುಮಕ್ಕಳು, ಸೊಸೆಯರು ಮತ್ತು ಮೊಮ್ಮಕ್ಕಳೊಂದಿಗೆ ತುಂಬಿದ ಪರಿವಾರದ ಒಡತಿ, 8ನೇ ತರಗತಿ ಪಾಸಾಗಿದ್ದ ವಿಮಲಾ ಅವರು ಈ ಮಕ್ಕಳ ಜೀವನವನ್ನು ಸುಧಾರಿಸುವ ಪಣತೊಟ್ಟರು. ಚಿಂದಿ ಆಯ್ದು ದುಡ್ಡು ಗಳಿಸುತ್ತಿದ್ದ, ಸ್ವಲ್ಪ ಹಣವನ್ನು ನಶೆಗಾಗಿ ಮತ್ತು ಬಾಕಿಯ ಹಣವನ್ನು ಮನೆಯ ಖರ್ಚನ್ನು ನಿಭಾಯಿಸಲು ತಾಯಿತಂದೆಗೆ ಸಹಾಯ ಮಾಡುತ್ತಿದ್ದ ಈ ಮಕ್ಕಳಿಗೋಸ್ಕರ ವಿಮಲಾ ಅವರು ದೃಢ ನಿರ್ಧಾರ ಮಾಡಿದರು. ಬೀದಿ ಗುಡಿಸುವವರ ಈ ವಸತಿಗಳ ಸ್ಥಿತಿ ಶೋಚನೀಯವಾಗಿಯೇ ಇತ್ತು, ವಸತಿಯ ಆಸುಪಾಸಿನಲ್ಲಿ ಬಹಳಷ್ಟು ಗಲೀಜೂ ಇತ್ತು. ಚಿಕ್ಕ ಚಿಕ್ಕ ಗುಡಿಸಲುಗಳಲ್ಲಿ ಹಂದಿಗಳ ಮಧ್ಯೆ ಬಿದ್ದುಕೊಂಡಿದ್ದ ಮಕ್ಕಳು, ನಶೆಯಲ್ಲಿ ಮುಳುಗಿದ್ದ ತಾಯಿತಂದೆಯರು. ಇಂಥ ಪರಿಸ್ಥಿತಿಯಲ್ಲಿ ಈ ಮಕ್ಕಳ ಓದಿನ ಬಗ್ಗೆ ಚಿಂತೆ ಮಾಡುವವರಾದರೂ ಯಾರು? ವಿಮಲಾ ಅವರು ಆ ಮಕ್ಕಳ ಮೂಗಿನ ಸಿಂಬಳ ಒರೆಸಿ, ಉಗುರು ಕತ್ತರಿಸುವುದರಿಂದ ಹಿಡಿದು, ಅವರನ್ನು ಸಂಸ್ಕಾರಯುತ ಶಿಕ್ಷಿತರನ್ನಾಗಿ ಮಾಡುವ ಕಾಯಕವನ್ನು ಕೈಗೆತ್ತಿಕೊಂಡರು.

ಸೇವಾಭಾರತಿಯ ಕಾರ್ಯಕರ್ತರ ಸಹಾಯದೊಂದಿಗೆ ಮೊದಲ 3 ವರ್ಷಗಳು ವಿಮಲಾರ ಮನೆಯಲ್ಲೇ ನಡೆಯುತ್ತಿದ್ದ ತರಗತಿಯು, ನಿಧಾನವಾಗಿ ಸೇವಾಭಾರತಿ ಬಾಲವಿದ್ಯಾಲಯವಾಗಿ ಮಾರ್ಪಾಡಾಯಿತು.





ಇಂದು 400ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಇಲ್ಲಿ ಕಲಿಯುತ್ತಿದ್ದಾರೆ. 12ನೇ ತರಗತಿಯಲ್ಲಿ ಓದುತ್ತಿರುವ ಶಿವಾನಿ ಹಾಗೂ ಅವಳ ತಂಗಿ ಇಬ್ಬರನ್ನೂ ವಿಮಲಾ ಅವರು ವಿದ್ಯಾರ್ಥಿನಿಲಯಕ್ಕೆ ಕರೆತಂದಿದ್ದರು. ತಾಯಿ ತಂದೆಯರ ಸಾವಿನ ನಂತರ ಶಿವಾನಿಗೆ ಇಲ್ಲಿಗೆ ಬರಲು ಮನಸ್ಸಿರಲಿಲ್ಲ. ಆದರೆ ಈಗ ಅವಳ ಯೋಚನೆಯೇ ಬದಲಾಗಿದೆ. 10ನೇ ತರಗತಿಯಲ್ಲಿ 62% ಅಂಕ ತೆಗೆದ ಶಿವಾನಿ ತನ್ನ ಅಜ್ಜಿಯಂತೆ ಕಾಳಜಿ ತೋರಿದ ವಿಮಲಾ ಅವರನ್ನು ತಬ್ಬಿಕೊಂಡು ಭಾವನಾತ್ಮಕವಾಗಿ ಧನ್ಯವಾದವನ್ನು ಸಲ್ಲಿಸಿದ್ದಳು.

ಬಿ. ಕಾಂ. ತೃತೀಯ ವರ್ಷದಲ್ಲಿರುವ ಲೋಕೇಶ್ ಕೋಲಿ ಓದುವುದರ ಜೊತೆಜೊತೆಗೆ ಇದೇ ಬಾಲವಿದ್ಯಾಲಯದಲ್ಲಿ ಶಿಕ್ಷಕರೂ ಆಗಿದ್ದಾರೆ. ಲೋಕೇಶ್ ಅತಿ ಸುಮಧುರವಾಗಿ ಕೊಳಲನ್ನೂ ನುಡಿಸಬಲ್ಲರು. ವಿಧವೆ ತಾಯಿ ಮತ್ತು ಮೂವರು ತಮ್ಮ – ತಂಗಿಯರಿದ್ದಾರೆ. ಲೋಕೇಶನನ್ನು ಓದಿಗೋಸ್ಕರ ವಿಮಲಾ ಅವರು ಬಲವಂತವಾಗಿ ಕರೆತಂದಾಗ ಅವನಿಗಿನ್ನೂ 8 ವರ್ಷವಾಗಿತ್ತಷ್ಟೇ. ಈ ರೀತಿಯ ಅನೇಕ ಕಥಾನಕಗಳು ಇಲ್ಲಿ ಹೇರಳವಾಗಿ ಸಿಗುತ್ತವೆ. ಈ ಕೆಲಸ ನೋಡಿದಷ್ಟು ಸುಲಭವಲ್ಲ, ತಂದೆತಾಯಿಯರನ್ನು ಒಪ್ಪಿಸುವುದು ಸುಲಭವಾಗಿರಲಿಲ್ಲ. ಪ್ಲಾಸ್ಟಿಕ್ ಆಯ್ದು ಹದಿನೈದೋ ಇಪ್ಪತ್ತು ರೂಪಾಯಿಗಳನ್ನು ಗಳಿಸುತ್ತಿದ್ದುದೇ ಶಿಕ್ಷಣಕ್ಕಿಂತ ಹೆಚ್ಚು ಸಹಕಾರಿಯೆನಿಸುತ್ತಿತ್ತು. ಮಕ್ಕಳು ಒಂದು ನಾಲ್ಕು ಗಂಟೆಗಳ ಕಾಲ ಓದಿ, ಬಾಕಿ ಸಮಯದಲ್ಲಿ ಚಿಂದಿ ಆಯುತ್ತಾರೆ ಎಂಬ ಷರತ್ತಿನ ಮೇಲೆ ಒಪ್ಪುತ್ತಿದ್ದರು. 3 ವರ್ಷಗಳ ಕಾಲ ಮಕ್ಕಳು ವಿಮಲಾ ಅವರ ಮನೆಯಲ್ಲೇ ಓದಿದರು. ಆದರೆ ಯಾವಾಗ ಸಂಖ್ಯೆ 100ಕ್ಕೂ ಅಧಿಕವಾಯಿತೋ, ಆಗ ಸೇವಾಭಾರತಿಯ ಸಹಯೋಗದಿಂದ ಈ ವಿದ್ಯಾಲಯವು ಒಂದು ಟೆಂಟಿನ ಒಳಗೆ ಸ್ಥಳಾಂತರವಾಯಿತು. ವಿಮಲಾ ಅವರು ಓದಿನೊಂದಿಗೆ ಮಕ್ಕಳಿಗೆ ಭಗವದ್ಗೀತೆಯ ಶ್ಲೋಕಗಳು, ಬಾಲರಾಮಾಯಣ, ಭಜನೆ, ಇತ್ಯಾದಿಗಳನ್ನು ಕಲಿಸುತ್ತಿದ್ದರು. ಈ ಮಕ್ಕಳು ಹಾರ್ಮೋನಿಯಂ, ಡೋಲಕ್ ಮತ್ತು ಹೊಲಿಗೆ ಕಸೂತಿಯಂಥ ಹವ್ಯಾಸಿ ವಿಷಯಗಳನ್ನೂ ಕಲಿತರು. ಜೈಪುರ ಹಿಂದೂ ಆಧ್ಯಾತ್ಮಿಕ ಮೇಳದಲ್ಲಿ ವೇದಿಕೆಯಲ್ಲಿ ಈ ಮಕ್ಕಳು ತಮ್ಮ ಸುಮಧುರ ಕಂಠದಲ್ಲಿ ಬಾಲರಾಮಾಯಣದ ಶ್ಲೋಕಗಳನ್ನು ಹಾಡಿದಾಗ, ಧನಪ್ರಕಾಶ್ ಅವರಿಗೆ ಆನಂದದ ಬಾಷ್ಪ ತುಂಬಿಬಂದಿತು.

ಇಂದು ಶಾರದಾ ಎನ್‌ಕ್ಲೇವ್‌ನ ಎರಡು ಮಹಡಿಯ ಕಟ್ಟಡದಲ್ಲಿ ನಡೆಯುತ್ತಿರುವ ಈ ವಿದ್ಯಾಲಯದಲ್ಲಿ ಓದುತ್ತಿರುವ 325 ಮಕ್ಕಳ ಪೂರ್ತಿ ಖರ್ಚನ್ನು ಸಮಾಜದ ಸಹಯೋಗದಿಂದ ಭರಿಸಲಾಗುತ್ತಿದೆ. 36 ಮಕ್ಕಳು ಅಲ್ಲೇ ಹಾಸ್ಟೆಲಿನಲ್ಲಿ ಇರುತ್ತಾರೆ. ತಮ್ಮ ಪರಿವಾರವನ್ನು ಬಿಟ್ಟು ವಿಮಲಾ ಅವರು ಈಗ ಈ ಮಕ್ಕಳ ಜೊತೆಯಲ್ಲಿಯೇ ಇರುತ್ತಾರೆ, SSC, ಬ್ಯಾಂಕಿಂಗ್, ಈ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳನ್ನೂ ಮಕ್ಕಳು ಬರೆಯುತ್ತಾರೆ. ವಿದ್ಯಾಲಯದ ಒಂದು ಶಾಖೆಯು ಈಗ ಸಾಂಗಾನೇರ್‌ನಲ್ಲಿ ಬಕ್ಸಾವಾಲಾದಲ್ಲಿ ಟೆಂಟಿನ ಒಳಗೆ ನಡೆಯುತ್ತಿದೆ, ಇಲ್ಲಿಯೂ 125 ಮಕ್ಕಳು ಶಿಕ್ಷಣ ಕಲಿಯುತ್ತಿದ್ದಾರೆ.

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ಗಿರಿಧರ್ ಉದ್ಯಾವರ, ಪಂಚಮಿ ಬಾಕಿಲಪದವು, ದೀಕ್ಷಿತ್ ನಾಯರ್ ಮಂಡ್ಯ



### ತಿರುಚ್ಚಿ ಎನ್‌ಐಟಿಗೆ ಪ್ರವೇಶ ಪಡೆದ ಮೊದಲ ಬುಡಕಟ್ಟು ಜನಾಂಗದ ವಿದ್ಯಾರ್ಥಿನಿ

ತಮಿಳುನಾಡಿನ ತಿರುಚಿರಾಪಳ್ಳಿ ಜಿಲ್ಲೆಯ ಎಂ ರೋಹಿಣಿ ಜೆಇಇ ಮೇನ್ಸ್‌ನಲ್ಲಿ ಶೇಕಡಾ 73.8 ಅಂಕಗಳನ್ನು ಗಳಿಸುವ ಮೂಲಕ ತಿರುಚ್ಚಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎನ್‌ಐಟಿ)ಗೆ ಪ್ರವೇಶ ಪಡೆದ ಮೊದಲ ಬುಡಕಟ್ಟು ವಿದ್ಯಾರ್ಥಿಯಾಗಿ ಹೊರಹೊಮ್ಮಿದ್ದಾಳೆ. ರೋಹಿಣಿಗೆ ತಿರುಚ್ಚಿ ಎನ್‌ಐಟಿಯಲ್ಲಿ ಕೆಮಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಸೀಟು ಸಿಕ್ಕಿದೆ.

### ಭಾರತದ ಉದ್ಯೋಗ ದರವು 6 ಪ್ರತಿಶತದಷ್ಟು ಬೆಳೆದಿದೆ: ಆರ್‌ಬಿಐ ದತ್ತಾಂಶ

31 ಮಾರ್ಚ್ 2024ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭಾರತದ ಉದ್ಯೋಗ ದರವು 6 ಪ್ರತಿಶತದಷ್ಟು ಬೆಳೆದಿದೆ, ಇದು 2022-23 ರಲ್ಲಿ 3.2 ರಷ್ಟು ಬೆಳವಣಿಗೆಯ ದರಕ್ಕಿಂತ ಹೆಚ್ಚು ಎಂದು ಮೂಲಗಳು ವರದಿ ಮಾಡಿವೆ. 2022-23 ರಲ್ಲಿ 59.67 ಕೋಟಿಗೆ ಹೋಲಿಸಿದರೆ, 2023-24 ರ ಆರ್ಥಿಕ ವರ್ಷದಲ್ಲಿ ದೇಶದಲ್ಲಿ ಉದ್ಯೋಗವು 4.67 ಕೋಟಿ ಹೆಚ್ಚಳಗೊಂಡು 64.34 ಕೋಟಿಗೆ ಏರಿಕೆಯಾಗಿದೆ ಎಂದು ಆರ್‌ಬಿಐ ದತ್ತಾಂಶಗಳು ತಿಳಿಸಿವೆ.

### ದೇಶದ ಮೊದಲ ಡ್ರಗ್ಸ್ ಸಹಾಯವಾಣಿ 1933ಗೆ ಚಾಲನೆ




ದೇಶದಲ್ಲಿ ಮಾದಕ ವಸ್ತುಗಳ ನಿಗ್ರಹಕ್ಕೆಂದೇ ಕೇಂದ್ರ ಸರ್ಕಾರ ಆರಂಭಿಸಿರುವ ಪ್ರತ್ಯೇಕ ಸಹಾಯವಾಣಿ '1933'ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಾಲನೆ ನೀಡಿ ದೇಶದಲ್ಲಿ 1 ಗ್ರಾಂ ಡ್ರಗ್ಸ್ ಪ್ರವೇಶಕ್ಕೂ ಅವಕಾಶ ನೀಡುವುದಿಲ್ಲ ಎಂದರು. ಈ ಸಹಾಯವಾಣಿ ಸಂಖ್ಯೆ ದಿನದ 24 ಗಂಟೆ ಕಾರ್ಯನಿರ್ವಹಿಸಲಿದೆ.

# ಸಾಲುದ್ದದ ಸುದ್ದಿಗಳು

ಯಾವುದೇ ವ್ಯಕ್ತಿ ಮಾದಕ ವಸ್ತುಗಳಿಗೆ ಸಂಬಂಧಿಸಿದ ದೂರು, ಸಲಹೆ ಹಾಗೂ ಮಾಹಿತಿಗಳನ್ನು ಇದರಲ್ಲಿ ಹಂಚಿಕೊಳ್ಳಬಹುದು. ಇದಕ್ಕೆ ಕರೆ ಮಾಡಿದವರ ಮಾಹಿತಿಯನ್ನು ಗುಪ್ತವಾಗಿ ಇಡಲಾಗುತ್ತದೆ. info.ncbmanas@ gov.in ಇ-ಮೇಲ್ ವಿಳಾಸ ಹಾಗೂ ncbmanas.gov.in ಉದ್ಘಾಟಿಸಿದರು. ಸಾರ್ವಜನಿಕರು ಇದರಲ್ಲಿ ಯಾವುದಕ್ಕಾದರೂ ಮಾದಕ ವಸ್ತು ಮಾರಾಟ, ಖರೀದಿ, ಸರಬರಾಜು ಇತ್ಯಾದಿ ದೂರುಗಳನ್ನು ಕಳುಹಿಸಬಹುದಾಗಿದೆ.

### ಕೃಷಿ ಹೊಂಡಗಳಿಗೆ ತಡೆಬೇಲಿ ಕಡ್ಡಾಯ: ರಾಜ್ಯ ಸರ್ಕಾರ ಆದೇಶ

ಜಮೀನುಗಳಲ್ಲಿ ನಿರ್ಮಾಣ ಮಾಡುವ ಕೃಷಿ ಹೊಂಡಗಳಿಗೆ ತಡೆ ಬೇಲಿ ಹಾಕುವುದನ್ನು ಕಡ್ಡಾಯಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಕೃಷಿ ಸಮ್ಮಾನ್, ರಾಜ್ಯ ಸರ್ಕಾರದ ಕೃಷಿ ಭಾಗ್ಯ ಯೋಜನೆ ಹಾಗೂ ಉದ್ಯೋಗ ಖಾತ್ರಿಗಳ ಮೂಲಕ ಪ್ರತಿ ವರ್ಷವೂ ಕೃಷಿ ಹೊಂಡಗಳನ್ನು ನಿರ್ಮಿಸಲಾಗುತ್ತಿದೆ. ಸಹಾಯಧನ ಪಡೆದು ರೈತರೇ ತಮ್ಮ ಹೊಲಗಳಲ್ಲಿ ನಿರ್ಮಿಸಿಕೊಳ್ಳುವ ಕೃಷಿ ಹೊಂಡಗಳಲ್ಲಿ ಮಕ್ಕಳು, ಜಾನುವಾರು ಬಿದ್ದು ಮೃತಪಟ್ಟ ಕೆಲ ಘಟನೆಗಳು ವರದಿಯಾಗಿವೆ. ಹಾಗಾಗಿ, ಕೃಷಿ ಹೊಂಡಗಳ ಸುತ್ತ ತಡೆಬೇಲಿ ಹಾಕುವುದನ್ನು



ಕಡ್ಡಾಯಗೊಳಿಸಲಾಗುವುದು ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಕೃಷಿ ಭಾಗ್ಯ ಯೋಜನೆ ಅಡಿಯಲ್ಲಿ 6,601 ಸೇರಿದಂತೆ 2023-24ನೇ ಸಾಲಿನಲ್ಲಿ ಒಟ್ಟು 15,871 ಕೃಷಿ ಹೊಂಡಗಳನ್ನು ನಿರ್ಮಿಸಲಾಗಿದೆ. ರಾಜ್ಯ ಸರ್ಕಾರ ಅದಕ್ಕಾಗಿ ₹23.32 ಕೋಟಿ ವೆಚ್ಚ ಮಾಡಿದೆ. ತಂತಿ ಬೇಲಿ ನಿರ್ಮಿಸಲು ಸರ್ಕಾರವೇ ಶೇ.40 ರಿಂದ 60ರಷ್ಟು ಸಬ್ಸಿಡಿ ನೀಡುತ್ತದೆ ಎಂದು ಹೇಳಲಾಗಿದೆ.

### ಬೆಂಗಳೂರು ವಿಮಾನ ನಿಲ್ದಾಣದಲ್ಲಿ "ಏರ್‌ಪೋರ್ಟ್ ಗೀತೆ"



ವಿಮಾನ ಪ್ರಯಾಣವನ್ನು ಇನ್ನಷ್ಟು ಮಾಧುರ್ಯವಾಗಿಸಲು ಹಾಗೂ ಕಾಯುವಿಕೆಯ ಸಮಯವನ್ನು ಸುಮಧುರಗೊಳಿಸಲು ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು, ಇದೀಗ ತನ್ನ ಅಧಿಕೃತ ಗೀತೆಯನ್ನು ಅನಾವರಣಗೊಳಿಸಿದ್ದು, ಮೂರು ಬಾರಿ ಗ್ರ್ಯಾಮಿ ಪ್ರಶಸ್ತಿ ವಿಜೇತ "ರಿಕಿ ಕೇಜ್" ಸಂಯೋಜಿಸಿದ ಡೈನಾಮಿಕ್ ದ್ವಿಭಾಷಾ ಟ್ರ್ಯಾಕ್ನನ್ನು ಬಿಡುಗಡೆ ಮಾಡಲಾಯಿತು. ಈ ಗೀತೆಯು ಎರಡು ಬಾರಿ ಗ್ರ್ಯಾಮಿ ಪ್ರಶಸ್ತಿ ವಿಜೇತ ಲೋನಿಪಾರ್ಕ್ ಮತ್ತು ಕನ್ನಡದ ಗಾಯಕ ಸಿದ್ಧಾರ್ಥ ಬೆಳ್ಮಣ್ಣು ಅವರ ಸುಮಧುರ ಕಂಠದಿಂದ ಮೂಡಿಬಂದಿದ್ದು, ಇಂಗ್ಲಿಷ್ ಮತ್ತು ಕನ್ನಡ ಭಾಷೆಯ ಮಿಶ್ರಣದಲ್ಲಿ ಈ ಗೀತೆ ಹೊರಹೊಮ್ಮಿದೆ.

### ಕೇಂದ್ರದಿಂದ ಭಯೋತ್ಪಾದನೆ ನಿಗ್ರಹಕ್ಕೆ ವಿಶೇಷ ತಂಡ

ಸಮಗ್ರ ಅಂಕಿ ಅಂಶವನ್ನು ಆಧರಿಸಿ ಕೃತಕ ಬುದ್ಧಿಮತ್ತೆ ಹಾಗೂ ಯಂತ್ರಾಧಾರಿತ ವಿಶ್ಲೇಷಣೆಗಳ ನೆರವಿನಲ್ಲಿ ಭಯೋತ್ಪಾದನೆ ಜಾಲದ ನಿರ್ಮೂಲನೆಗೆ ವಿಶೇಷ ತಂಡವನ್ನು ರಚಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಒಲವು ತೋರಿದ್ದಾರೆ. ರಾಷ್ಟ್ರೀಯ ಭದ್ರತೆ ಹೊಣೆಗಾರಿಕೆಯಲ್ಲಿ ನಿಯೋಜಿತವಾಗಿರುವ ವಿವಿಧ ಸಂಸ್ಥೆಗಳಿಂದ ಆಯ್ಕೆ ಮಾಡಿಕೊಳ್ಳಲಾದ ಯುವ, ತಾಂತ್ರಿಕವಾಗಿ ಪರಿಣತರಾಗಿರುವ ಮತ್ತು ವೃತ್ತಿ ಒಲವುಳ್ಳ ಅಧಿಕಾರಿಗಳ ತಂಡವನ್ನು ರಚಿಸಲಾಗುವುದು ಎಂದು ಭದ್ರತೆ ಮತ್ತು ಕಾನೂನು ಜಾರಿಗೆ ಸಂಬಂಧಿತ ವಿವಿಧ ಸಂಸ್ಥೆಗಳ ಮುಖ್ಯಸ್ಥರಿದ್ದ ಗುಪ್ತದಳದ ಬಹು ಏಜೆನ್ಸಿ ಕೇಂದ್ರದ (ಎಂಎಸಿ) ಕಾರ್ಯ ಪರಿಶೀಲನೆಯ ಉನ್ನತ ಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು. ಎಂಎಸಿ ಕೂಡಾ ದಿನದ 24 ಗಂಟೆ ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ತಕ್ಷಣದ ಕ್ರಮ ಅಗತ್ಯವಿರುವ ಗುಪ್ತದಳ ಮಾಹಿತಿಯನ್ನು ಸಂಬಂಧಿತ ಭಾಗಿದಾರರ ಜೊತೆ ಹಂಚಿಕೊಳ್ಳಬೇಕು.

## ಕಡಿಮೆ ವೆಚ್ಚದಲ್ಲಿ ಸುದೀರ್ಘ ಬಾಳಿಕೆಯ ಪ್ಲ್ಯಾಸ್ಟಿಕ್ ಮನೆ ನಿರ್ಮಿಸಿದ ಮಹಾರಾಷ್ಟ್ರದ ಡಾ. ಬಲ್ಮುಕುಂದ್

ಮಹಾರಾಷ್ಟ್ರದ ಚಂದ್ರಾಪುರದ ಬೊಟಾನಿಕಲ್ ಗಾರ್ಡನ್‌ನಲ್ಲಿರುವ ಒಂದು ವಿಶಿಷ್ಟವಾದ ಎರಡು ಅಂತಸ್ತಿನ ಮನೆಯು ಜನರ ಆಕರ್ಷಣೆಯ ತಾಣವಾಗಿದೆ. ಡಾ| ಬಲ್ಮುಕುಂದ್ ಪಲಿವಾಲ್ ನಿರ್ಮಿಸಿದ ಈ ಮನೆ 625 ಚದರ ಅಡಿ, 18 ಅಡಿ ಎತ್ತರ ಮತ್ತು 10 ಅಡಿ ಅಗಲದಲ್ಲಿ ಹರಡಿಕೊಂಡಿದೆ. ಮನೆಯ ಪ್ರತಿಯೊಂದು ಭಾಗವೂ ಪ್ಲಾಸ್ಟಿಕ್‌ನಿಂದ ಕೂಡಿದ್ದು, ಆಲೂಗಡ್ಡೆ ಚಿಪ್ಸ್ ಪ್ಯಾಕೆಟ್‌ಗಳು, ನೀರಿನ ಬಾಟಲಿಗಳು, ಔಷಧಿ ಹೊದಿಕೆಗಳು, ಸೌಂದರ್ಯವರ್ಧಕಗಳ ಬಾಟಲಿಗಳು ಮತ್ತು ಹಾಲಿನ ಪೌಚ್‌ಗಳು ಸೇರಿಸಿ ತಯಾರಿಸಲಾಗಿದೆ. ಈ ಪ್ಲಾಸ್ಟಿಕ್ ಮನೆ ಕೂಡ ಪೋರ್ಟಬಲ್ ಆಗಿದೆ. ಶೀಘ್ರವಾಗಿ ಕೆಡವಬಹುದು ಮತ್ತು ಸ್ಕ್ರೂಗಳನ್ನು ನಿರ್ವಹಿಸುವ ಮೂಲಕ ಎರಡರಿಂದ ಐದು ಗಂಟೆಗಳ ಒಳಗೆ ಜೋಡಿಸಬಹುದು. ಪ್ರಸ್ತುತ ಮನೆಯನ್ನು ಪ್ರವಾಸಿಗರು ಮತ್ತು ಉದ್ಯಾನಕ್ಕೆ ಭೇಟಿ ನೀಡುವ ಮಗುವಿಗೆ ಹಾಲುಣಿಸುವ ತಾಯಂದಿರು ಬಳಸುತ್ತಿದ್ದಾರೆ.

ಸಿಮೆಂಟ್ ಮನೆಗೆ ಹೋಲಿಸಿದರೆ, ಪ್ಲಾಸ್ಟಿಕ್ ಮನೆ ನಿರ್ಮಿಸಲು ಯಾವುದೇ ನೀರಿನ ಅಗತ್ಯವಿಲ್ಲ. ಅಲ್ಲದೆ, ಬಲವರ್ಧಿತ ಕಾಂಕ್ರೀಟ್ನಲ್ಲಿ, ಪರ್ಕೋಲೇಷನ್ ಮತ್ತು ಬಿರುಕುಗಳು ಅಂತಿಮವಾಗಿ ಸಂಭವಿಸುತ್ತವೆ. ಆದರೆ ಪ್ಲಾಸ್ಟಿಕ್ ಮನೆಯಲ್ಲಿ, ಯಾವುದೇ ಬಿರುಕುಗಳು ಇರುವುದಿಲ್ಲ. ಬಲವರ್ಧಿತ ಸಿಮೆಂಟ್ ರಚನೆಗಳಿಗೆ 20 ರಿಂದ 25 ವರ್ಷಗಳಲ್ಲಿ ನಿರ್ವಹಣೆ ಅಗತ್ಯವಿರುತ್ತದೆ ಆದರೆ ಪ್ಲಾಸ್ಟಿಕ್‌ನಿಂದ ಮಾಡಿದ ರಚನೆಗಳಲ್ಲಿ ಅಂತಹ ನಿರ್ವಹಣೆ ಅಗತ್ಯವಿಲ್ಲ. ಇದು ನಿಮ್ಮ ಜೀವಿತಾವಧಿಯ ನಂತರವೂ ದಶಕಗಳವರೆಗೆ ಇರುತ್ತದೆ ಎಂದು ಅವರು ಹೇಳುತ್ತಾರೆ.

ಗಣಿಗಳು, ಸಿಮೆಂಟ್ ಮತ್ತು ಸ್ಫೋಟಕ ಕಾರ್ಖಾನೆಗಳನ್ನು ಹೊಂದಿರುವ ಕೈಗಾರಿಕಾ ಪ್ರದೇಶವಾಗಿರುವುದರಿಂದ ಚಂದ್ರಾಪುರ



ನಗರವು ಅತ್ಯಂತ ಕಲುಷಿತ ನಗರಗಳಲ್ಲಿ ಒಂದಾಗಿದೆ. ಮಾಲಿನ್ಯವನ್ನು ಕಡಿಮೆ ಮಾಡಲು ಈ ಮನೆ ಸಹಕಾರಿ. ಸುರಕ್ಷತೆಯ ಅಪಾಯಗಳ ಬಗ್ಗೆ ಮಾತನಾಡುತ್ತಾ, ಡಾ ಬಲ್ಮುಕುಂದ್ ಈ ಮನೆ ತುಕ್ಕು-ಮುಕ್ತ, ಅಗ್ನಿ ನಿರೋಧಕ ಮತ್ತು ಆಘಾತ-ಮುಕ್ತವಾಗಿದೆ. ಸಾಮಾನ್ಯವಾಗಿ, ಪ್ಲಾಸ್ಟಿಕ್ ಸುಮಾರು 250 ಡಿಗ್ರಿಯಲ್ಲಿ ಕರಗುತ್ತದೆ ಮತ್ತು ಅದನ್ನು ಸುಡಲು 300 ಡಿಗ್ರಿಗಿಂತ ಹೆಚ್ಚು ಅಗತ್ಯವಿರುತ್ತದೆ. ಮರದ ಮನೆಗಳು ಪ್ಲಾಸ್ಟಿಕ್ ಮನೆಗಿಂತ ವೇಗವಾಗಿ ಬೆಂಕಿ ಹೊತ್ತಿಕೊಳ್ಳುತ್ತವೆ ಎಂದರು. ಈ ಎಲ್ಲಾ ಕಾರಣಗಳಿಂದಾಗಿ ಡಾ. ಪಾಲಿವಾಲ್ ಪ್ಲಾಸ್ಟಿಕ್‌ನಿಂದ ಮಾಡಿದ ಮನೆಯನ್ನು ವಿನ್ಯಾಸಗೊಳಿಸಲು ಮುಂದಾದರು.

ಸಂಗ್ರಹಣೆ, ಯಂತ್ರೋಪಕರಣಗಳು, ಕಾರ್ಮಿಕರು ಸೇರಿ ಪ್ಲಾಸ್ಟಿಕ್ ಮನೆ ನಿರ್ಮಾಣಕ್ಕೆ 9 ಲಕ್ಷ ರೂಪಾಯಿ ವೆಚ್ಚವಾಗಿದೆ. ಇದು ಸಾಂಪ್ರದಾಯಿಕ ಸಿಮೆಂಟ್ ಮನೆಗಿಂತ ತುಲನಾತ್ಮಕವಾಗಿ 20 ಪ್ರತಿಶತ ಕಡಿಮೆಯಾಗಿದೆ. ಡಾ. ಪಾಲಿವಾಲ್ ಅವರ ಈ ಯೋಜನೆಯು ನಿಜಕ್ಕೂ ಪ್ರೇರಣದಾಯಿ. ಪ್ಲಾಸ್ಟಿಕ್ ತ್ಯಾಜ್ಯವನ್ನು ಸದುಪಯೋಗಗೊಳಿಸಿ ಪರಿಸರವನ್ನು ರಕ್ಷಿಸಲು ಸಹಕಾರಿಯಾಗಿದೆ.

## ಶಾಲೆ ಪ್ರವೇಶಕ್ಕೆ ಟಿಸಿ ಅಗತ್ಯವಿಲ್ಲ: ಮದ್ರಾಸ್ ಹೈಕೋರ್ಟ್



ಹೊಸ ಶಾಲೆಗೆ ಪ್ರವೇಶ ಪಡೆಯಲು ಹಿಂದಿನ ಶಾಲೆಯ ವರ್ಗಾವಣೆ ಪತ್ರ (ಟಿಸಿ)ದ ಅಗತ್ಯವಿಲ್ಲ ಎಂದು ಮದ್ರಾಸ್ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ. ಶಾಲೆಗಳು ವರ್ಗಾವಣೆ ಪತ್ರವನ್ನು ಬಾಕಿ ಶುಲ್ಕ ವಸೂಲಿಯ ಸಾಧನವನ್ನಾಗಿ ಮಾಡಿಕೊಳ್ಳುವಂತಿಲ್ಲ ಎಂದು ಕೋರ್ಟ್ ಹೇಳಿದೆ. ನ್ಯಾ. ಎಸ್ ಎಂ ಸುಬ್ರಮಣಿಯಂ ಹಾಗೂ ಸಿ ಕುಮಾರಪ್ಪನ್ ಅವರ ಪೀಠ ಈ ಆದೇಶ ನೀಡಿದೆ. ಮಕ್ಕಳ ವರ್ಗಾವಣೆ ಪತ್ರದ ಮೇಲೆ ಶುಲ್ಕ ಬಾಕಿ ಸಂಬಂಧ ಯಾವುದೇ ವಿಚಾರವನ್ನೂ ನಮೂದಿಸುವಂತಿಲ್ಲ ಇದು ವಿದ್ಯಾರ್ಥಿಯ ಖಾಸಗಿ ದಾಖಲೆಯಾಗಿರುತ್ತದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಈ ಬಗ್ಗೆ ತಮಿಳುನಾಡು ಸರಕಾರಕ್ಕೆ ನಿರ್ದೇಶನ ನೀಡಿರುವ ಹೈಕೋರ್ಟ್ ಹೊಸ ಶಾಲೆಗೆ ದಾಖಲಾತಿ ಸಮಯದಲ್ಲಿ ಹಿಂದಿನ ಶಾಲೆಯಿಂದ ವರ್ಗಾವಣೆ ಪತ್ರವನ್ನು ನೀಡಬೇಕೆಂದು ಒತ್ತಾಯಿಸುವಂತಿಲ್ಲ. ಹಾಗೇ ವರ್ಗಾವಣೆ ಪತ್ರದಲ್ಲಿ ಶುಲ್ಕ ಬಾಕಿ ಸಂಬಂಧ ಯಾವುದೇ ಉಲ್ಲೇಖ ಮಾಡುವಂತಿಲ್ಲ ಎಂಬ ಸುತ್ತೋಲೆ ಹೊರಡಿಸುವಂತೆ ತಿಳಿಸಿದೆ. ಒಮ್ಮೆ ಈ ನಿಯಮ ಉಲ್ಲಂಘನೆಯಾದಲ್ಲಿ ಸೆಕ್ಷನ್ 17(ಆರ್‌ಟಿಇ) ಕಡ್ಡಾಯ ಶಿಕ್ಷಣ ಹಕ್ಕು ಅಡಿಯಲ್ಲಿ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ. ಶಾಲೆ ಶುಲ್ಕ ಪಾವತಿಸುವುದು ಪೋಷಕರ ಕರ್ತವ್ಯ ಆದರೆ ಈ ವಿಚಾರದಲ್ಲಿ ಮಕ್ಕಳ ಮೇಲೆ ಒತ್ತಡ ಹೇರುವುದು, ಅವಮಾನಿಸುವುದು ಸರಿಯಲ್ಲ. ಪೋಷಕರಿಂದ ಶುಲ್ಕ ಪಡೆಯುವ ಹಕ್ಕು ಶಿಕ್ಷಣ ಸಂಸ್ಥೆಗಿದೆ ಆದರೆ ಈ ಪ್ರಕ್ರಿಯೆಯಲ್ಲಿ ಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮ ಬೀರಬಾರದು ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JULY 2024
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-08-2024



## 11ಲಕ್ಷ ಗಿಡ ನೆಟ್ಟು ಇಂದೋರ್ ವಿಶ್ವದಾಖಲೆ



ಇಂದೋರ್ ದೇಶದ ಅತ್ಯಂತ ಸ್ವಚ್ಛ ನಗರ ಎಂಬ ಕೀರ್ತಿಗೆ ಭಾಜನರಾಗಿರುವ ನಗರ. ಇದೀಗ ಒಂದೇ ದಿನದಲ್ಲಿ 11ಲಕ್ಷ ಗಿಡಗಳನ್ನು ನೆಡುವ ಮೂಲಕ ಅತೀ ಹೆಚ್ಚು ಗಿಡಗಳನ್ನು ನೆಟ್ಟ ನಗರ ಎಂಬ ಕೀರ್ತಿಗೆ ಭಾಜನವಾಗಿದ್ದಲ್ಲದೇ ವಿಶ್ವ ದಾಖಲೆ ನಿರ್ಮಿಸಿದೆ. ಇಂದೋರ್‌ನಲ್ಲಿ ನಡೆದ ವಿಶೇಷ ಅಭಿಯಾನದಲ್ಲಿ ನಗರಾದ್ಯಂತ ಒಂದೇ ದಿನ ಬರೋಬ್ಬರಿ 11 ಲಕ್ಷ ಗಿಡಗಳನ್ನು ನೆಡುವ ಮೂಲಕ ವಿನೂತನ ವಿಶ್ವ ದಾಖಲೆಯ ಸೃಷ್ಟಿಗೆ ಕಾರಣವಾಗಿದೆ. ಈ ಸಾಧನೆಯು ದೇಶದ ಸ್ವಚ್ಛ ನಗರ ಎಂಬ ಖ್ಯಾತಿಯ ಇಂದೋರ್‌ನ ಮುಕುಟಕ್ಕೆ ದೊರೆತ ಮತ್ತೊಂದು ಗರಿ. 2023ರಲ್ಲಿ ಅಸ್ಸಾಂನಲ್ಲಿ ಒಂದೇ ದಿನ 9,26,000 ಸಸಿಗಳನ್ನು ನೆಡಲಾಗಿತ್ತು. ಇದು ಈವರೆಗಿನ ಗರಿಷ್ಟ ಸಾಧನೆಯಾಗಿತ್ತು. ಇದೀಗ ಇಂದೋರ್ ಸಾಧನೆಯನ್ನು ಹಿಂದಿಕ್ಕಿದೆ. ಈ ಬಗ್ಗೆ ಗಿನ್ನಿಸ್ ವಿಶ್ವ ದಾಖಲೆಯ ಸಲಹೆಗಾರ ನಿಶ್ಚಲ್ ಬರೋಟ್ ಮಾಹಿತಿ ನೀಡಿದ್ದಾರೆ. ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಈ ದಾಖಲೆಗಾಗಿ ಗಿನ್ನೆಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಿಂದ ಅಧಿಕೃತ ಪ್ರಮಾಣಪತ್ರವನ್ನು ಸ್ವೀಕರಿಸಿದ್ದಾರೆ.

## ವಿಚ್ಛೇದಿತ ಮುಸ್ಲಿಂ ಮಹಿಳೆ ಪತಿಯಿಂದ ಜೀವನಾಂಶ ಪಡೆಯಲು ಅರ್ಹಳು: ಸುಪ್ರೀಂ

ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಮಹತ್ವದ ತೀರ್ಪೊಂದನ್ನು ನೀಡಿದ್ದು ಮುಸ್ಲಿಂ ಸಮುದಾಯದ ವಿಚ್ಛೇದಿತ ಮಹಿಳೆ ಪತಿಯಿಂದ ಜೀವನಾಂಶ ಪಡೆಯಲು ಅರ್ಹಳು ಎಂದು ನುಡಿದಿದೆ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಸೆಕ್ಷನ್ 125ರ ಅಡಿಯಲ್ಲಿ ವಿಚ್ಛೇದಿತ ಮುಸ್ಲಿಂ ಮಹಿಳೆ ತನ್ನ ಪತಿಯಿಂದ ಜೀವನಾಂಶವನ್ನು ಪಡೆಯಲು ಅರ್ಹಳು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದು, ಮುಸ್ಲಿಂ ಮಹಿಳೆಯರ (ವಿಚ್ಛೇದನದ ಮೇಲಿನ ಹಕ್ಕುಗಳ ರಕ್ಷಣೆ) ಕಾಯಿದೆ, 1986 ಕಾನೂನು ಜಾತ್ಯಾತೀತತೆಕ್ಕಿಂತ ಮಿಗಿಲಾದುದಲ್ಲ ಎಂದು ಪ್ರತಿಪಾದಿಸಿದೆ. ತನ್ನ ಮಾಜಿ ಪತ್ನಿಗೆ ರೂ.10,000 ಮಧ್ಯಂತರ ಜೀವನಾಂಶ ನೀಡುವಂತೆ ತೆಲಂಗಾಣ ಹೈಕೋರ್ಟ್ ನೀಡಿರುವ ನಿರ್ದೇಶನವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮುಸ್ಲಿಂ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ನ್ಯಾಯಮೂರ್ತಿ ಆಗಸ್ಟಿನ್ ಜಾರ್ಜ್ ಮಸಿಹ್ ಅವರ ಪೀಠವು ಮುಸ್ಲಿಂ ಮಹಿಳೆಯ ಹಕ್ಕನ್ನು ಎತ್ತಿಹಿಡಿಯುವ ತೀರ್ಪುಗಳನ್ನು ಪ್ರಕಟಿಸಿದೆ. ಸೆಕ್ಷನ್ 125 ಸಿಆರ್‌ಪಿಸಿ (ಕೋಡ್ ಆಫ್ ಕ್ರಿಮಿನಲ್ ಪ್ರೋಸಿಜರ್) ಅಡಿಯಲ್ಲಿ ಯಾವುದೇ ಅರ್ಜಿ ವಿಚಾರಣೆಗೆ ಬಾಕಿಯಿರುವಾಗ, ಮುಸ್ಲಿಂ ಮಹಿಳೆ ವಿಚ್ಛೇದನ ಪಡೆದರೆ, ಆಕೆ ಮುಸ್ಲಿಂ ಮಹಿಳೆಯರ (ವಿವಾಹದ ಮೇಲಿನ ಹಕ್ಕುಗಳ ರಕ್ಷಣೆ) ಕಾಯಿದೆ, 2019ನ್ನು ಆಶ್ರಯಿಸಬಹುದು ಎಂದು ಹೇಳಿದೆ.

## ಪಾಕ್‌ನಲ್ಲಿ ವೃದ್ಧಿಸಿದ ಹಿಂದೂಗಳ ಜನಸಂಖ್ಯೆ!

ಪಾಕಿಸ್ತಾನದ ಹಿಂದೂ ಸಮುದಾಯದ ಜನಸಂಖ್ಯೆಯಲ್ಲಿ ಹೆಚ್ಚಳವಾಗಿದ್ದು, 2017ರಲ್ಲಿ 35 ಲಕ್ಷವಿದ್ದ ಈ ಸಮುದಾಯದ ಜನಸಂಖ್ಯೆಯು 2023ರಲ್ಲಿ 38 ಲಕ್ಷಕ್ಕೆ ಏರಿಕೆಯಾಗಿದೆ ಎಂದು ಕಳೆದ ವರ್ಷದ ಜನಗಣತಿಯ ಅಧಿಕೃತ ದತ್ತಾಂಶದಿಂದ ತಿಳಿದುಬಂದಿದೆ. ಈ ಮೂಲಕ ಹಿಂದೂ ಸಮುದಾಯವು ಪಾಕಿಸ್ತಾನದ ಅತ್ಯಂತ ದೊಡ್ಡ ಅಲ್ಪಸಂಖ್ಯಾತ ಸಮುದಾಯ ಎಂದು ಪಾಕಿಸ್ತಾನ ಅಂಕಿಅಂಶ ಕಾರ್ಯಾಲಯ (ಪಿಬಿಎಸ್) ಹೊರಬಿಟ್ಟಿರುವ 'ಜನಸಂಖ್ಯೆ ಮತ್ತು ವಸತಿ ಗಣತಿ– 2023'ರ ದತ್ತಾಂಶವನ್ನು ಆಧರಿಸಿ ಅಲ್ಲಿಯ ಸ್ಥಾನೀಯ ಸುದ್ದಿಪತ್ರಿಕೆ ವರದಿ ಮಾಡಿದೆ. 2023ರಲ್ಲಿ ದೇಶದ ಒಟ್ಟು ಜನಸಂಖ್ಯೆ 24.08 ಕೋಟಿಯಷ್ಟಿದೆ. ಮುಸ್ಲಿಮರ ಜನಸಂಖ್ಯೆಯಲ್ಲಿ ಅಲ್ಪ ಇಳಿಕೆ ಕಂಡುಬಂದಿದೆ. ಆ ಸಮುದಾಯದ ಜನಸಂಖ್ಯೆಯು 2017ರಲ್ಲಿ ಶೇ 96.47 ಇದ್ದು, 2023ರಲ್ಲಿ ಶೇ 96.35ಕ್ಕೆ ಇಳಿದಿದೆ. ಇದೇ ವೇಳೆ, ದೇಶದ ಇತರ ಪ್ರಮುಖ ಅಲ್ಪಸಂಖ್ಯಾತ ಸಮುದಾಯಗಳ ಜನಸಂಖ್ಯೆಯು ಏರಿಕೆಯಾಗಿದೆ. 26 ಲಕ್ಷ ಇದ್ದ ಕ್ರಿಶ್ಚಿಯನ್ನರ ಜನಸಂಖ್ಯೆಯು 33 ಲಕ್ಷಕ್ಕೆ ಏರಿಕೆಯಾಗಿದೆ. ಉಳಿದಂತೆ ಪಾಕಿಸ್ತಾನದಲ್ಲಿ ಅಹ್ಮದೀಯರು 1.62 ಲಕ್ಷ, ಸಿಖ್ಖರು 15,998 ಮತ್ತು ಪಾರ್ಸಿಯರು 2,348 ಸಂಖ್ಯೆಯಲ್ಲಿದ್ದಾರೆ.

## ದೊಡ್ಡಬಳ್ಳಾಪುರದಲ್ಲಿ ದೇಶದ ಪ್ರಥಮ ಗ್ರೀನ್ ಹೈಡ್ರೋಜನ್ ಎಲೆಕ್ಟ್ರೋಲೈಜರ್ ಗಿಗಾ ಫ್ಯಾಕ್ಟರಿ



ದೊಡ್ಡಬಳ್ಳಾಪುರ ಸಮೀಪ ಅಮೆರಿಕಾ ಮೂಲದ ಓಮಿಯಮ್ ಕಂಪನಿ ಸ್ಥಾಪಿಸಿರುವ ದೇಶದ ಪ್ರಪ್ರಥಮ ಗ್ರೀನ್ ಹೈಡ್ರೋಜನ್ ಎಲೆಕ್ಟ್ರೋಲೈಜರ್ ಗಿಗಾ ಫ್ಯಾಕ್ಟರಿ ಕಾರ್ಯಾರಂಭ ಮಾಡಿದೆ. ಕೇಂದ್ರದ ನವೀಕರಿಸಬಹುದಾದ ಇಂಧನ ಇಲಾಖೆ ಸಚಿವ ಪ್ರಹ್ಲಾದ ಜೋಷಿ ಅವರು ಈ ಘಟಕಕ್ಕೆ ಚಾಲನೆ ನೀಡಿದ್ದಾರೆ. ಇಲ್ಲಿ ಸದ್ಯಕ್ಕೆ ವರ್ಷಕ್ಕೆ 500 ಮೆಗಾವ್ಯಾಟ್ ಗ್ರೀನ್ ಹೈಡ್ರೋಜನ್ ಉತ್ಪಾದನೆಯಾಗಲಿದ್ದು, ಹಂತಹಂತವಾಗಿ 2,000 ಮೆಗಾವ್ಯಾಟ್ ಮಟ್ಟಕ್ಕೆ ಏರಿಸಲಾಗುತ್ತದೆ. ನೀರಿನಿಂದ ತಯಾರಾಗುವ ಗ್ರೀನ್–ಹೈಡ್ರೋಜನ್ ಅನ್ನು ಕಿಲೋಗ್ರಾಂ ಲೆಕ್ಕದಲ್ಲಿ ಅಳತೆ ಮಾಡಲಾಗುತ್ತದೆ. ಇದರ ಸಂಗ್ರಹಣೆ ಮತ್ತು ಸಾಗಣೆ ಕೂಡ ಸುಲಭವಾಗಿದೆ. ಇದನ್ನು ರಸಗೊಬ್ಬರ ಮತ್ತು ಉಕ್ಕು ಉತ್ಪಾದನೆ, ವಾಹನಗಳಲ್ಲಿ ಎಥನಾಲ್ ಜತೆ ಮಿಶ್ರಣವಾಗಿ, ಸಂಸ್ಕರಣೆ ಪ್ರಕ್ರಿಯೆಗಳಲ್ಲಿ ಧಾರಾಳವಾಗಿ ಉಪಯೋಗಿಸಬಹುದು.

## ಬಾಂಗ್ಲಾ ಹಿಂಸಾಚಾರ: ಸುರಕ್ಷಿತವಾಗಿ ಹಿಂದಿರುಗಿದ 978 ಭಾರತೀಯರು

ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದ ಹಿಂಸಾತ್ಮಕ ಪ್ರತಿಭಟನೆಗಳ ನಂತರ ಢಾಕಾದಲ್ಲಿನ ಭಾರತೀಯ ಹೈಕಮಿಷನ್ ಮತ್ತು ಚಿತ್ತಗಾಂಗ್, ರಾಜ್‌ಶಾಹಿ, ಸಿಲ್ಹೆಟ್ ಮತ್ತು ಖುಲ್ನಾದಲ್ಲಿನ ಸಹಾಯಕ ಹೈಕಮಿಷನ್‌ಗಳು ಭಾರತೀಯ ಪ್ರಜೆಗಳ ಸುರಕ್ಷಿತ ವಾಪಸಾತಿಗಾಗಿ ಪ್ರಯತ್ನಗಳನ್ನು ನಡೆಸುತ್ತಿವೆ. ಇಲ್ಲಿಯವರೆಗೆ, ಒಟ್ಟು 778 ಭಾರತೀಯ ವಿದ್ಯಾರ್ಥಿಗಳು ವಿವಿಧ ಭೂ ಬಂದರುಗಳ ಮೂಲಕ ಭಾರತಕ್ಕೆ ಮರಳಿದ್ದಾರೆ. ಇದಲ್ಲದೆ, ಸುಮಾರು 200 ವಿದ್ಯಾರ್ಥಿಗಳು ಢಾಕಾ ಮತ್ತು ಚಿತ್ತಗಾಂಗ್ ವಿಮಾನ ನಿಲ್ದಾಣಗಳ ಮೂಲಕ ಸಾಮಾನ್ಯ ವಿಮಾನ ಸೇವೆಗಳ ಮೂಲಕ ಮನೆಗೆ ಮರಳಿದ್ದಾರೆ. "ಢಾಕಾದಲ್ಲಿರುವ ಭಾರತದ ಹೈಕಮಿಷನ್ ಮತ್ತು ನಮ್ಮ ಸಹಾಯಕ ಹೈಕಮಿಷನ್‌ಗಳು ಬಾಂಗ್ಲಾದೇಶದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಉಳಿದಿರುವ 4,000 ಕ್ಕೂ ಹೆಚ್ಚು ವಿದ್ಯಾರ್ಥಿಗಳೊಂದಿಗೆ ನಿಯಮಿತವಾಗಿ ಸಂಪರ್ಕದಲ್ಲಿವೆ" ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಬಾಂಗ್ಲಾದೇಶದಲ್ಲಿ ಸರ್ಕಾರಿ ಉದ್ಯೋಗಗಳಿಗಾಗಿನ ಕೋಟಾಗಳ ವಿರುದ್ಧ ಈ ವಾರ ನಡೆದ ವಿದ್ಯಾರ್ಥಿಗಳ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಕನಿಷ್ಠ 105 ಜನರು ಸಾವನ್ನಪ್ಪಿದ್ದಾರೆ.

## 2041ರಲ್ಲಿ ಅಸ್ಸಾಂ ಮುಸ್ಲಿಂ ರಾಜ್ಯ: ಸಿಎಂ ಹಿಮಂತ ಬಿಸ್ವಾ ಶರ್ಮಾ ಕಳವಳ



ಅಸ್ಸಾಂ ಮುಖ್ಯಮಂತ್ರಿ ಡಾ. ಹಿಮಂತ ಬಿಸ್ವಾ ಶರ್ಮಾ ಅವರು 2041ರ ವೇಳೆಗೆ ತಮ್ಮ ರಾಜ್ಯ ಮುಸ್ಲಿಂ ರಾಜ್ಯವಾಗುವುದು ಎಂದು ಕಳವಳ ವ್ಯಕ್ತಪಡಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದಲ್ಲಿ 1.92 ಕೋಟಿ ಹಿಂದೂಗಳಿದ್ದು ಒಟ್ಟು ಜನಸಂಖ್ಯೆಯ ಶೇ. 61.47ರಷ್ಟಿದ್ದಾರೆ. ತಮ್ಮ ರಾಜ್ಯದಲ್ಲಿ ಮುಸ್ಲಿಂ ಜನಸಂಖ್ಯೆಯು ಪ್ರತಿ 10 ವರ್ಷಗಳಿಗೊಮ್ಮೆ ಶೇಕಡಾ 30 ರಷ್ಟು ಬೆಳೆಯುತ್ತಿದೆ ಮತ್ತು 2041ರ ವೇಳೆಗೆ ಅವರು ಬಹುಸಂಖ್ಯಾತರಾಗುತ್ತಾರೆ. ಅಂಕಿಅಂಶಗಳ ಮಾದರಿಯ ಪ್ರಕಾರ ಮುಸ್ಲಿಮರು ಈಗ ಅಸ್ಸಾಂನ ಜನಸಂಖ್ಯೆಯ ಶೇಕಡಾ 40 ರಷ್ಟು ಆಗಿದ್ದಾರೆ. ಇದು 1951ರಲ್ಲಿ 12% ಆಗಿತ್ತು. ಒಳನುಸುಳುವಿಕೆ ಮತ್ತು ಜನಸಂಖ್ಯಾ ಬದಲಾವಣೆಯಿಂದಾಗಿ ನಾವು ರಾಜ್ಯದ ಅನೇಕ ಜಿಲ್ಲೆಗಳನ್ನು ಕಳೆದುಕೊಂಡಿದ್ದೇವೆ. ಬಾಲ್ಯ ವಿವಾಹವನ್ನು ತಡೆಗಟ್ಟಲು ಮತ್ತು ವಿವಾಹ ಮತ್ತು ವಿಚ್ಛೇದನ ನೋಂದಣಿಯಲ್ಲಿ ಸಮಾನತೆಯನ್ನು ಖಚಿತಪಡಿಸಿಕೊಳ್ಳಲು 1935ರ ಅಸ್ಸಾಂ ಮುಸ್ಲಿಂ ವಿವಾಹಗಳು ಮತ್ತು ವಿಚ್ಛೇದನ ನೋಂದಣಿ ಕಾಯ್ದೆಯನ್ನು ರದ್ದುಗೊಳಿಸಲು ಅಸ್ಸಾಂ ಸರ್ಕಾರ ನಿರ್ಧರಿಸಿದೆ ಎಂದು ಅವರು ತಿಳಿಸಿದರು.

## ದಿಲ್ಲಿ ವಿಶ್ವ ಪಾರಂಪರಿಕ ಸಮ್ಮೇಳನ: ಹಂಪಿ ಕಲ್ಲಿನ ರಥ ಲಾಂಛನ



ಭಾರತದಲ್ಲಿ ಜು.21–31ರವರೆಗೆ ಮೊದಲ ಬಾರಿಗೆ ಆಯೋಜನೆಗೊಂಡ ವಿಶ್ವಸಂಸ್ಥೆಯ ಪಾರಂಪರಿಕ ಸಮ್ಮೇಳನವು ದೆಹಲಿಯ ಭಾರತ ಮಂಟಪಂನಲ್ಲಿ ನಡೆಯಿತು. ವಿಶೇಷವೆಂದರೆ ಮೊದಲ ಬಾರಿಗೆ ಭಾರತದಲ್ಲಿ ಆಯೋಜನೆಗೊಂಡ ಈ ಜಾಗತಿಕ ಕಾರ್ಯಕ್ರಮಕ್ಕೆ ಲಾಂಛನವಾಗಿ ಕರ್ನಾಟಕದ ಹಂಪಿಯ ಕಲ್ಲಿನ ರಥವನ್ನು ಬಳಸಿಕೊಳ್ಳಲಾಗಿತ್ತು. ಇದರಲ್ಲಿ 21 ದೇಶಗಳ ಪ್ರತಿನಿಧಿಗಳು ಭಾಗವಹಿಸಲಿದ್ದು, ಜಿ20 ಶೃಂಗದ ಬಳಿಕ ನಡೆಯಲಿರುವ ದೊಡ್ಡ ಸಮ್ಮೇಳನ ಇದಾಗಿತ್ತು.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.